# ಹಂಪಿ ಟೈಮ್ಸ್

HAMPI TIMES
KANNADA DAILY
ಕನ್ನಡ ದಿನಪತ್ರಿಕೆ

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 • ಸಂಚಿಕೆ: 254 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 15.04.2025 • ಮಂಗಳವಾರ • ಪುಟ:04 • ಬೆಲೆ:2
Volume:02 • Issue: 254 • PRGI No:KARKAN/2023/88055 • VIJAYANAGARA • 15.04.2025 • Tuesday • Page:04 • Rs:2









## ದೇವಾಲಯ ದರ್ಶನ

ಹಂಪಿ ಶ್ರೀ ವಿರೂಪಾಕ್ಷೇಶ್ವರ ದರ್ಶನ

ನಿತ್ಯ ಅಭಿಷೇಕ ಸಮಯ
ಬೆಳಿಗ್ಗೆ: 6:30, 10:30 ಸಂಜೆ 6:30ಕ್ಕೆ

-: ದರ್ಶನ ಸಮಯ :-
ಬೆಳಿಗ್ಗೆ 6.30 ರಿಂದ ಮಧ್ಯಾಹ್ನ 1.15ರವರೆಗೆ
ಮಧ್ಯಾಹ್ನ 3 ರಿಂದ ರಾತ್ರಿ 7.30ರವರೆಗೆ

## ಆನಂದ ಬಾಣ





Ads Starts from Rs.1000
Contact: 94486 33038


ಆಚರಣೆಯೊಂದಿಗೆ ಅನುಕರಣೆಗೆ ಆದ್ಯತೆ ನೀಡಬೇಕು | ಅಂಬೇಡ್ಕರ್ ಜಯಂತಿಯಲ್ಲಿ ಡಿಸಿ ಎಂ.ಎಸ್.ದಿವಾಕರ್ ಹೇಳಿಕೆ

# ಸಂವಿಧಾನದಿಂದ ಮಾನವನ ಕಲ್ಯಾಣ

## ಶೀಘ್ರದಲ್ಲೆ ನಿವೇಶನ ಅಂತಿಮಗೊಳಿಸಿ ಡಾ.ಬಿ.ಆರ್.ಅಂಬೇಡ್ಕರ್ ಭವನ ನಿರ್ಮಾಣ

■ **ಹಂಪಿ ಟೈಮ್ಸ್ ಹೊಸಪೇಟೆ**

ಸಮಾನತೆ, ಶಾಂತಿ, ಮಹಿಳೆಯರ ಅಭಿವೃದ್ಧಿ, ಭ್ರಾತೃತ್ವ, ಶಿಕ್ಷಣಕ್ಕೆ ಪ್ರೋತ್ಸಾಹ ಯಾವ ಸಮಾಜದಲ್ಲಿ ಇದೆಯೋ ಅದೇ ನಿಜವಾದ ಧರ್ಮ ಅದೊಂದೆ ಮಾನವ ಧರ್ಮ ಎಂದು ಡಾ.ಬಿ.ಆರ್.ಅಂಬೇಡ್ಕರ್ ಸಂದೇಶ ನೀಡಿದ್ದಾರೆ ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಹೇಳಿದರು.

ನಗರದ ಜೈ ಭೀಮ್ ವೃತ್ತದಲ್ಲಿ ಜಿಲ್ಲಾಡಳಿತ, ಜಿಪಂ, ಸಮಾಜ ಕಲ್ಯಾಣ ಇಲಾಖೆ, ನಗರಸಭೆ ಹೊಸಪೇಟೆ, ಡಾ.ಬಿ.ಆರ್.ಅಂಬೇಡ್ಕರ್ ಸಂಘ ಮತ್ತು ಡಾ.ಬಾಬು ಜಗಜೀವನ್ ರಾಮ್ ಸಂಘದ ಸಹಯೋಗದಲ್ಲಿ ಏರ್ಪಡಿಸಿದ್ದ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ರವರ 134ನೇ ಜನ್ಮ ದಿನಾಚರಣೆ ಹಾಗೂ ಮಾಜಿ ಉಪಪ್ರಧಾನಿ ಡಾ.ಬಾಬು ಜಗಜೀವನ್ ರಾಮ್‌ರವರ 118ನೇ ಜನ್ಮ ದಿನಾಚರಣೆ ಸಮಾರಂಭ ಉದ್ಘಾಟಿಸಿ ಸೋಮವಾರ ಮಾತನಾಡಿದರು. ಡಾ.ಅಂಬೇಡ್ಕರ್ ಜಯಂತಿ ಆಚರಣೆ ಜೊತೆಗೆ ಅವರ ಆದರ್ಶ, ಸಿದ್ಧಾಂತಗಳ ಅನುಕರಣೆಗೆ ಹೆಚ್ಚಿನ ಆದ್ಯತೆ ನೀಡಬೇಕಿದೆ. ರಕ್ತದಾನ, ಆರೋಗ್ಯ ಸೇವೆಗಳಿಂದ ಅಂಬೇಡ್ಕರ್ ಜಯಂತಿ ಶ್ರೇಷ್ಠತೆ ಪಡೆಯಲಿದೆ. ಅಂದು ಅಂಬೇಡ್ಕರ್ ರವರು ನೀಡಿದ ಸಂವಿಧಾನದಿಂದ ಸಮಸಮಾಜದ ಕನಸು ನನಸಾಗಿ ದೇಶದ ಗೌರವ ಹೆಚ್ಚಾಗಿದೆ. ಇದು ಜಾಗತಿಕ ಮನ್ನಣೆ ಪಡೆದ ಏಕೈಕ ಸಂವಿಧಾನ ಭಾರತದ್ದಾಗಿದೆ. ಅಂಬೇಡ್ಕರ ನೀಡಿದ ಸಂವಿಧಾನದಿಂದಾಗಿ ಇಂದಿಗೂ ಮಾನವನ ಕಲ್ಯಾಣ ಸಾಧ್ಯವಾಗಿದೆ. ಇದೇ ಮಾದರಿ ಯಲ್ಲಿ ಮನುಷ್ಯನಲ್ಲಿರುವ ಸಂಸ್ಕಾರ, ಮುಂದಿನ ಮಾನವನ ಸಂಸ್ಕೃತಿಗೆ ಅಸ್ಮಿತೆ ಆಗಬೇಕೆಂಬುದು ಅಂಬೇಡ್ಕರ್‌ರವರ ಆಶಯವಾಗಿತ್ತು. ಮನುಷ್ಯರಿಗೆ ಮನುಷ್ಯರು ಸಮಾನರು ಆಗಬೇಕಿದೆ, ಆಗಲೇ ಸಮಸಮಾಜ ನಿರ್ಮಾಣ ಸಾಧ್ಯ ಎಂಬ ಚಿಂತನೆ ಅವರದ್ದಾಗಿದೆ.



ಅಂಬೇಡ್ಕರ್ ತತ್ವಾದರ್ಶಗಳು, ಚಿಂತನೆಗಳನ್ನು ಕೇವಲ ಬೋಧನೆಯಲ್ಲಷ್ಟೇ ಅಲ್ಲ ಬದುಕಿನಲ್ಲಿ ಅಳವಡಿಸಿ ಕೊಂಡರೇ ಜಯಂತಿ ಆಚರಣೆಯಿಂದ ಅರ್ಥಪೂರ್ಣ ಗೌರವ ಸಲ್ಲಿಸಿದಂತಾಗಲಿದೆ ಎಂದರು.

ಜಿಪಂ ಸಿಇಒ ನೊಂಗ್ಜಾಯ್ ಮೊಹಮ್ಮದ್ ಅಕ್ರಮ್ ಅಲಿ ಷಾ ಮಾತನಾಡಿ, ಅಂಬೇಡ್ಕರ್ ಅಸಮಾನತೆ ವಿರುದ್ಧ ಹೋರಾಟ ಆರಂಭಿಸಿ ಇಡೀ ದೇಶಕ್ಕೆ ಸಮಾನತೆಗೆ ಸಂವಿಧಾನವನ್ನು ಕೊಡುಗೆಯನ್ನಾಗಿ ನೀಡಿದ್ದಾರೆ. ಅದರ ಪ್ರತಿಫಲವೇ ಶೋಷಿತ ಸಮುದಾಯಗಳು ಸಮಾನತೆಯಿಂದ ಎಲ್ಲಾ ಹಕ್ಕುಗಳನ್ನು ನ್ಯಾಯಯುತವಾಗಿ ಪಡೆಯಲು ಸಹಕಾರಿಯಾಗಿದೆ. ಅಂಬೇಡ್ಕರ್‌ರವರ ಮನೆಯಲ್ಲಿ 50 ಸಾವಿರ ಪುಸ್ತಕಗಳನ್ನು ಹೊಂದಿದ ಬೃಹತ್ ಗ್ರಂಥಾಲಯವನ್ನು ಹೊಂದಿದ್ದರು. ಅವರು ಮಾಡಿರುವ ಸಾಧನೆಯನ್ನು ಅಕ್ಷರಗಳಲ್ಲಿ, ಮಾತುಗಳಲ್ಲಿ ಪೂರ್ಣಗೊಳಿಸಲು ಸಾಧ್ಯವಿಲ್ಲ. ಅಂಬೇಡ್ಕರ್ ರಚನೆಯ ಗ್ರಂಥಗಳನ್ನು ಎಲ್ಲಾರು ಓದಲು ಉತ್ತೇಜನ ನೀಡಬೇಕಿದೆ ಎಂದರು.

ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಶ್ರೀಹರಿಬಾಬು.ಬಿ.ಎಲ್. ಮಾತನಾಡಿ, ಎಲ್ಲಾ ಜಯಂತಿ ಆಚರಣಗಳಿಂದ ನಮಗೆ ಕಲಿಕೆಯುವ ಅಗತ್ಯವಿದೆ. ಅಂಬೇಡ್ಕರ್‌ರವರ ಸಿದ್ಧಾಂತಗಳನ್ನು ಪಾಲಿಸಬೇಕಿದೆ. 1920 ರಲ್ಲಿ ಮೂಕನಾಯಕ ಎಂಬ ಪತ್ರಿಕೆಯನ್ನು ಆರಂಭಿಸಿ ಜನರಿಗೆ ಜಾಗೃತಿ ಮೂಡಿಸಲು ಹರಸಾಹಸ ಪಟ್ಟಿದ್ದಾರೆ. ಶಿಕ್ಷಣ, ಸಂಘಟನೆ, ಹೋರಾಟಗಳ ಮಹತ್ವವನ್ನು ಸಾರಿದ್ದಾರೆ ಎಂದರು.

ಡಾ.ಬಿ.ಆರ್.ಅಂಬೇಡ್ಕರ್ ಕುರಿತು ಡಾ.ರಾಜಕುಮಾರ ಹಾಗೂ ಡಾ.ಬಾಬೂಜೀ ಕುರಿತು ಡಾ.ತಿಪ್ಪೇಸ್ವಾಮಿ ಉಪನ್ಯಾಸ ನೀಡಿದರು. ವೇದಿಕೆಯಲ್ಲಿ ಸಂವಿಧಾನದ ಪಿಠೀಕೆಯನ್ನು ವಾಚನ ಮಾಡಲಾಯಿತು. ಇದಕ್ಕೂ ಮುನ್ನ ಹಂಪಿಯ ವಿರೂಪಾಕ್ಷ ದೇಗುಲದಿಂದ ಯುವಕರು ಜ್ಯೋತಿಯನ್ನು ಮೆರವಣಿಗೆ ತಂದು ನಗರದ ಬಳ್ಳಾರಿ ವೃತ್ತದಲ್ಲಿನ ಅಂಬೇಡ್ಕರ್ ಪುತ್ಥಳಿಯಿಂದ ವಿವಿಧ ಪ್ರಮುಖ ಬೀದಿಗಳಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಮತ್ತು ಬಾಬೂಜೀಯವರ ಭಾವಚಿತ್ರವನ್ನು ಜೈಭೀಮ್ ವೃತ್ತದವರೆಗೆ ಭವ್ಯ ಮೆರವಣಿಗೆ ನಡೆಸಲಾಯಿತು.

ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಸಾಧಕರನ್ನು ಗುರುತಿಸಿ ಗೌರವಿಸಿ ಸನ್ಮಾನಿಸಲಾಯಿತು. ರಕ್ತದಾನ ಶಿಬಿರದಲ್ಲಿ ಯುವಕರು ಪಾಲ್ಗೊಂಡು ರಕ್ತದಾನ ಮಾಡಿದರು. ಈ ವೇಳೆ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಹೆಚ್.ಎನ್.ಎಫ್.ಇಮಾಮ್ ನಿಯಾಜಿ, ಸಹಾಯಕ ಆಯುಕ್ತರಾದ ಪಿ.ವಿವೇಕಾನಂದ, ತಹಸೀಲ್ದಾರ ಎಂ.ಶೃತಿ, ಅಂಬೇಡ್ಕರ್ ಸಂಘದ ಅಧ್ಯಕ್ಷ ಕೆ.ಪಿ.ಉಮಾಪತಿ, ಅಂಬೇಡ್ಕರ್ ಸಂಘದ ಗೌರವಾಧ್ಯಕ್ಷ ವೀರಸ್ವಾಮಿ, ನಗರಸಭೆ ಪೌರಯುಕ್ತ ಚಂದ್ರಪ್ಪ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು ಭಾಗವಹಿಸಿದ್ದರು.





# ಜಾತಿಗಣತಿ ಅಂಕಿ-ಅಂಶ ಸಂಶಯ

## ಜಗದ್ಗುರು ವಚನಾನಂದ ಶ್ರೀಗಳು ಅಸಮಾಧಾನ | ಕೊಟ್ಟೂರಲ್ಲಿ ಪಂಚಮಸಾಲಿ ಸಂಘಟನಾ ಸಭೆ



■ **ಹಂಪಿ ಟೈಮ್ಸ್ ಕೊಟ್ಟೂರು**

ವೀರಶೈವ ಲಿಂಗಾಯತರ ಜನಸಂಖ್ಯೆ 2013 ರಲ್ಲಿ 83 ಲಕ್ಷವಿತ್ತು. ಈಗ ಜಾತಿಗಣತಿ ವರದಿಯಲ್ಲಿ 65 ಲಕ್ಷ ಎಂದು ತೋರಿಸಲಾಗಿದೆ. ವರದಿಯ ಅಂಕಿ ಅಂಶಗಳು ಸಂಶಯಾಸ್ಪದವಾಗಿವೆ ಎಂದು ಹರಿಹರ ಪೀಠದ ಜಗದ್ಗುರು ವಚನಾನಂದ ಸ್ವಾಮಿಗಳು ಹೇಳಿದರು.

ಪಟ್ಟಣದಲ್ಲಿ ವೀರಶೈವ ಲಿಂಗಾಯತ ಪಂಚಮಸಾಲಿ ಸಮಾಜ ತಾಲೂಕು ಘಟಕದಿಂದ ಆಯೋಜಿಸಿದ್ದ ಜಿಲ್ಲಾ ಪಂಚಮಸಾಲಿ ಸಮಾಜದ ಸಂಘಟನಾ ಸಭೆಯಲ್ಲಿ ಮಾತನಾಡಿದರು. 10 ವರ್ಷದಲ್ಲಿ ಜನಸಂಖ್ಯೆ ಹೆಚ್ಚಾಗುತ್ತದೆ ಹೊರತು ಇಳಿಕೆಯಾಗುವುದಿಲ್ಲ ಎಂಬ ಸಾಮಾನ್ಯ ಅರಿವು ಎಲ್ಲಾ ಸಮುದಾಯಗಳಿಗೂ ಇರುತ್ತದೆ. ಎಲ್ಲಾ ಲಿಂಗಾಯಿತ ಸಮುದಾಯ ಜನಸಂಖ್ಯೆ 65 ಲಕ್ಷ ವರದಿಯಾಗಿದೆ. ಎಲ್ಲಾ ಲಿಂಗಾಯತ ಸಮುದಯಾಗಳು ಸಂಘಟಿತ ರಾಗಬೇಕು. ನಿರ್ಲಕ್ಷ್ಯವಹಿಸಿದರೆ ಸೌಲಭ್ಯಗಳು ಮರೀಚಿಕೆಯಾಗಲಿವೆ. ಸಮಾಜದ ಕಟ್ಟಕಡೆಯ ವ್ಯಕ್ತಿಗೆ ಸೌಲಭ್ಯ ಕಲ್ಪಿಸಲು ಎಲ್ಲರೊಂದಿಗೆ ಚರ್ಚಿಸಿ ಹೋರಾಟದ ತೀರ್ಮಾನ ಕೈಗೊಳ್ಳಲಾಗುವುದು. ಪಂಚಮಸಾಲಿ ಸಮುದಾಯದ ಪ್ರಿಯೊಬ್ಬರೂ ಪೀಠದಲ್ಲಿ ಹೆಸರು ನೋಂದಾಯಿಸಿಕೊಳ್ಳಿರಿ. ವರದಿಗಳ ಅಂಕಿ ಅಂಶ ಎಷ್ಟು ಸತ್ಯ ಎಂಬುದು ಭವಿಷ್ಯದಲ್ಲಿ ಬಯಲಾಗುತ್ತದೆ. ಸೌಲಭ್ಯ ಪಡೆಯಲು ಸಂಖ್ಯಾಬಲ ಆಟ ನಡೆಯುತ್ತಿದೆ ಎಂದರು.

ಅನೇಕ ಮುಖಂಡರು ಮಾತನಾಡಿ, ಸಮಾಜದ ಉಭಯ ಜಗದ್ಗುರುಗಳು ಒಂದೇ ವೇದಿಕೆಯಲ್ಲಿ ಸಮಾಜ ಸಂಘಟಿಸಬೇಕು. ಸಮಾಜದಲ್ಲಿ ಎಲ್ಲರ ಒಮ್ಮತದೊಂದಿಗೆ ಸಂಘಟನಾ ಶಕ್ತಿ ಹೆಚ್ಚಿಸಬೇಕು ಎಂದು ಅಭಿಪ್ರಾಯಗಳನ್ನು ಹಂಚಿಕೊಂಡರು.

ಜಿಲ್ಲಾ ಅಧ್ಯಕ್ಷ ಪ್ರಕಾಶ ಪಾಟೀಲ್, ಸಂಘದ ರಾಜ್ಯ ಅಧ್ಯಕ್ಷ ಸೋಮನಗೌಡ ಎಮ್ ಪಾಟೀಲ್, ರಾಜ್ಯ ಪ್ರಧಾನ ಕಾರ್ಯದರ್ಶಿ ಪರಮೇಶ ಪಟ್ಟಣಶೆಟ್ಟಿ, ಸಮಾಜದ ಮುಖಂಡರು ಹಗರಿಬೊಮ್ಮನಹಳ್ಳಿ ನಟರಾಜ್, ಬಾವಿ ರವಿ, ಮಹಿಳಾ ಘಟಕ ಲಕ್ಷ್ಮೀ, ಯುವ ಘಟಕ ಜಿಲ್ಲಾ ಅಧ್ಯಕ್ಷ ಕಿಚಿಡಿ ಕೊಟ್ರೇಶ್, ಕೂಡ್ಲಿಗಿ ತಾ.ಅದ್ಯಕ್ಷರು ರೇವಣ್ಣ, ಕರಣಂ ಮಾಂತಪ್ಪ ಇತರರು ಮಾತನಾಡಿದರು.

ಕಾರ್ಯಕ್ರಮದಲ್ಲಿ ರಾಜ್ಯ ಉಪಾಧ್ಯಕ್ಷ ಶಿವಚರಣ ದೇವರಮನಿ, ಮಹದೇವ ಶಿಕ್ಷಣ ಸಂಸ್ಥೆ ಆಡಳಿತಾಧಿಕಾರಿ ಬಸಾಪುರ ಪಂಪಾಪತಿ, ತಾಲೂಕು ಕಾರ್ಯದರ್ಶಿ ಹೆಚ್.ಅಶೋಕ, ಖಾನಾವಳಿ ಶಿವಕುಮಾರ್, ರಾಂಪುರ ವಿವೇಕನಂದ ಇತರರುದ್ದರು. ಕೊಟ್ಟೂರು ತಾಲೂಕು ಅಧ್ಯಕ್ಷ ಚಾಪಿ ಚಂದ್ರಪ್ಪ ಸ್ವಾಗತಿಸಿದರು, ಈಶ್ವರಪ್ಪ ತುರುಕಾಣಿ, ಶಿವಕುಮಾರ್ ನಿರೂಪಿಸಿದರು.

# ಎಲ್ಲರ ಪ್ರಗತಿಗೆ ಶಿಕ್ಷಣವೇ ರಹದಾರಿ



■ **ಹಂಪಿ ಟೈಮ್ಸ್ ಕೂಡ್ಲಿಗಿ**

ಶಿಕ್ಷಣದಿಂದ ಮಾತ್ರ ಅಸಮಾನತೆಯನ್ನು ಸಂಪೂರ್ಣವಾಗಿ ಹೋಗಲಾಡಿಸಲು ಸಾಧ್ಯ ಎಂಬುದು ಅಂಬೇಡ್ಕರ್ ಅವರ ಆಶಯವಾಗಿತ್ತು ಎಂದು ಶಾಸಕ ಡಾ.ಎನ್.ಟಿ.ಶ್ರೀನಿವಾಸ್ ಹೇಳಿದರು.

ಪಟ್ಟಣದ ಚಂದ್ರಶೇಖರ್ ಅಜಾದ್ ರಂಗಮಂದಿರದಲ್ಲಿ ಸೋಮವಾರ ತಾಲೂಕು ಆಡಳಿತ, ಸಮಾಜ ಕಲ್ಯಾಣ ಇಲಾಖೆ ಹಾಗೂ ದಲಿತ ಪರ ಸಂಘಟನೆಗಳು ಏರ್ಪಡಿಸಿದ್ದ ಅಂಬೇಡ್ಕರ್ ಅವರ 132 ಜಯಂತಿ ಹಾಗೂ ಬಾಬು ಜಗಜೀವನ್ ರಾಮ್ ಅವರ 118 ಜಯಂತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ದೇಶಕ್ಕೆ ಶ್ರೇಷ್ಠ ಸಂವಿಧಾನ ನೀಡಿದ ಅಂಬೇಡ್ಕರ್, ಮೀಸಲಾತಿಯನ್ನು ಅಳವಡಿಸಿ ತಳ ಸಮುದಾಯಗಳನ್ನು ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಮತ್ತು ಆರ್ಥಿಕವಾಗಿ ಸದೃಢಗೊಳಿಸಿದರು. ಬಾಬು ಜಗಜೀವನ್ ರಾಮ್ ಕೂಡ ದೇಶದಲ್ಲಿನ ಅಸಮಾನತೆ ಹೋಗಲಾಡಿಸಲು ಶ್ರಮಿಸಿದರು ಎಂದರು.

ಪಪಂ ಅಧ್ಯಕ್ಷ ಕಾವಲಿ ಶಿವಪ್ಪನಾಯಕ, ಡಿವೈಎಸ್ಪಿ ಮಲ್ಲೇಶ್ ದೊಡ್ಡಮನಿ, ತಹಸೀಲ್ದಾರ್ ವಿ.ಕೆ.ನೇತ್ರಾವತಿ, ಬಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಗುಂಡುಮುಣುಗು ತಿಪ್ಪೇಸ್ವಾಮಿ, ಅಂಬೇಡ್ಕರ್ ಸಂಘದ ತಾಲೂಕು ಅಧ್ಯಕ್ಷ ಗುಣಸಾಗರ ಕೃಷ್ಣಪ್ಪ, ಪಪಂ ಸದಸ್ಯರು ಸೇರಿದಂತೆ ಅನೇಕರು ಉಪಸ್ಥಿತರಿದ್ದರು.



ಹಂಪಿ ಟೈಮ್ಸ್ HAMPI TIMES

# ಬೇಸಿಗೆ ಶಿಬಿರಗಳು ಮಕ್ಕಳ ಸೃಜನಶೀಲತೆಗೆ ಒತ್ತು ಕೊಡಲಿ....

■ ಶೇಖರಯ್ಯ ಟಿ ಎಚ್ ಎಂ ಗೆದ್ದಲಗಟ್ಟೆ.



ನಮ್ಮ ಬಾಲ್ಯದ ದಿನಗಳಲ್ಲಿ ರಜಾ ದಿನಗಳನ್ನು ಅಜ್ಜ-ಅಜ್ಜಿಯ ಮನೆಯಲ್ಲೋ, ಸಂಬಂಧಿಕರ ಮನೆಯಲ್ಲೋ ಕಳೆಯುತ್ತಿದ್ದೆವು. ಆಟ,ಹಾಡು, ಕುಣಿತ, ಈಜು, ಮೋಜು ಅಂತ ರಜಾ ದಿನಗಳನ್ನು ಕಳೆದದ್ದೇ ಗೊತ್ತಾಗುತ್ತಿರಲಿಲ್ಲ. ಆದರೆ ಪ್ರಸ್ತುತ ದಿನಮಾನಗಳಲ್ಲಿ ಈ ರೀತಿಯಲ್ಲಿ ಬೇಸಿಗೆ ರಜಾ ದಿನಗಳನ್ನು ಕಳೆಯುವ ಅವಕಾಶ ಹಲವಾರು ಕಾರಣಗಳಿಂದ ಬಹುತೇಕ ಮಕ್ಕಳಿಗೆ ದೊರಕುತ್ತಿಲ್ಲ. ಪೋಷಕರು ಅನಿವಾರ್ಯ ಕಾರಣದಿಂದ ಮತ್ತು ತಮ್ಮ ಮಕ್ಕಳು ಮತ್ತಷ್ಟು ಬುದ್ಧಿವಂತರಾಗಲಿ, ತಮ್ಮ ಜ್ಞಾನ-ಕುಶಲತೆ, ಸೃಜನಶೀಲತೆಯನ್ನು ವೃದ್ಧಿಸಿಕೊಳ್ಳುವಂತಾಗಲಿ, ಮಕ್ಕಳು ಬೆಳೆದು ಉನ್ನತ ಸ್ಥಾನಮಾನಗಳನ್ನು ಪಡೆಯಲಿ ಎಂಬ ದೂರ ದೃಷ್ಟಿಯಿಂದ ತಮ್ಮ ಮಕ್ಕಳನ್ನು ಬೇಸಿಗೆ ಶಿಬಿರಗಳಿಗೆ ಸೇರಿಸುತ್ತಿದ್ದಾರೆ. ಹೀಗೆ ಕೆಲವೊಮ್ಮೆ ಸ್ವಇಚ್ಛೆಯಿಂದಲೋ ಅಥವಾ ಪೋಷಕರ ಒತ್ತಾಯಕ್ಕೆ ಮಣಿದೋ ಮಕ್ಕಳು ಈ ಶಿಬಿರಗಳಿಗೆ ಹಾಜರಾಗುತ್ತಾರೆ. ಇಂದಿನ ವಿಭಕ್ತ ಕುಟುಂಬ ವ್ಯವಸ್ಥೆಯಲ್ಲಿ, ತಂದೆ-ತಾಯಿಗಳಿಬ್ಬರೂ ಉದ್ಯೋಗ ಅರಸಿ ಹೊರಗೆ ಹೋಗುವುದರಿಂದ, ಶಾಲಾ ಕಾಲೇಜುಗಳಿಗೆ ರಜೆ ಇರುವುದರಿಂದ, ಹಗಲಿನ ಸಮಯದಲ್ಲಿ ಅವರನ್ನು ನೋಡಿಕೊಳ್ಳಲು ಯಾರು ಇಲ್ಲದಿರುವುದರಿಂದ ಮಕ್ಕಳು ಅನಿವಾರ್ಯವಾಗಿ ತಮ್ಮ ವಿರಾಮಕಾಲದ ಸಮಯವನ್ನು ಕಳೆಯಲು ಟಿವಿ, ಮೊಬೈಲ್ ಅಂತ ಕಾಲಹರಣ ಮಾಡುವ ಬದಲು, ಸಮವಯಸ್ಕರ ಜೊತೆ ಸೇರಿ ನವನವೀನ ಕೌಶಲ, ಜ್ಞಾನವನ್ನು ಪಡೆಯುವ ಉದ್ದೇಶದಿಂದ ಇಂತಹ ಶಿಬಿರಗಳಿಗೆ ಸೇರಿಕೊಳ್ಳುವುದು ತಪ್ಪೇನಲ್ಲ.

ಹೀಗಾಗಿ ಬೇಸಿಗೆ ಶಿಬಿರಗಳು ಮತ್ತದೇ ಪಠ್ಯಗಳನ್ನು ಬೋಧನೆ ಮಾಡುವುದರ ಬದಲು.... ಪಠ್ಯಗಳ ಆಚೆ ಹೊಸ ಜ್ಞಾನವನ್ನು ಕಟ್ಟಿಕೊಡುವತ್ತ, ಮಕ್ಕಳ ಪ್ರತಿಭೆಗಳಿಗೆ ಹೊಸ ನಾವಿನ್ಯತೆಯನ್ನು ನೀಡುವತ್ತ, ಮಕ್ಕಳನ್ನು ಸೃಜನಶೀಲರನ್ನಾಗಿ ರೂಪಿಸುವತ್ತ ಹೆಚ್ಚು ಗಮನ ಹರಿಸಬೇಕಿದೆ. ಮಕ್ಕಳಿಗೆ ತಮ್ಮ ಸುತ್ತಮುತ್ತಣ ಸಮಾಜವನ್ನು ಅರಿಯುವ, ಪರಿಸರದ ಬಗೆಗಿನ ಜ್ಞಾನವನ್ನು ನೀಡುವ ಮೂಲಕ ಪರಿಸರ ಉಳಿವಿನ ಜಾಗೃತಿಯನ್ನು ಉಂಟುಮಾಡುವ ಕಾಯಕಗಳತ್ತ ಗಮನ ಕೊಡಬೇಕಿದೆ. ಹಾಗೆಯೇ ಪಾಲಕ ಪೋಷಕರು ಸಹ ಬಹು ಎಚ್ಚರಿಕೆಯಿಂದ ಶಿಬಿರದ ಪೂರ್ವಾಪರಗಳನ್ನು ವಿಚಾರಿಸಿ, ಮಕ್ಕಳಿಗೆ ಸುರಕ್ಷತೆ ಇರುವ ಶಿಬಿರಗಳಿಗೆ ಸೇರಿಸುವುದು ಒಳಿತು. ಬೇಸಿಗೆ ಶಿಬಿರಗಳಿಗೆ ಸೇರಿಸಿದರಷ್ಟೇ ಮಕ್ಕಳು ಜಾಣರಾಗುತ್ತಾರೆಂಬ ಪರಿಕಲ್ಪನೆಯೂ ಸಾಧುವಲ್ಲ. ಸಾಧ್ಯವಾದಲ್ಲಿ ಪೋಷಕರೇ ತಮ್ಮ ಮಕ್ಕಳಿಗೆ ನಾವಿನ್ಯ ಚಟುವಟಿಕೆಗಳ ಮೂಲಕ ಬೇಸಿಗೆಯ ರಜಾವಧಿಯನ್ನು ಮಕ್ಕಳಿಗೆ ಜೀವನ ಶಿಕ್ಷಣ ಕಲಿಸುವ ಅವಕಾಶವನ್ನಾಗಿಯೂ ಮಾರ್ಪಡಿಸಿಕೊಳ್ಳಬಹುದು. ಈ ನಿಟ್ಟಿನಲ್ಲಿ ಪಾಲಕ ಪೋಷಕರು ಒಂದಷ್ಟು ಸಮಯವನ್ನು ಮಕ್ಕಳಿಗಾಗಿಯೇ ಮೀಸಲಿಡಬೇಕಾದ ಅನಿವಾರ್ಯತೆ ಇದೆ.

**ಬೇಸಿಗೆ ಶಿವರಗಳು ಹೀಗಿರಲಿ:**

ಬೇಸಿಗೆ ಶಿಬಿರಗಳು ಕಡ್ಡಾಯವಾಗಿ ಸುರಕ್ಷಿತ ಸ್ಥಳದಲ್ಲಿ ಆಯೋಜನೆಗೊಳ್ಳಬೇಕು. ವಿಶೇಷವಾಗಿ ಇದು ಬೇಸಿಗೆ ಕಾಲವಾದ್ದರಿಂದ ಸಾಕಷ್ಟು ಗಾಳಿ-ಬೆಳಕು ಇರುವ ಸ್ಥಳವಾದರೆ ತುಂಬಾ ಒಳಿತು. ವಿಶೇಷವಾಗಿ ಶಿಬಿರಗಳು ಮಕ್ಕಳ ಸ್ನೇಹಿಯಾಗಿರಬೇಕು. ಇಂತಹುದನ್ನೇ ಕಲಿಯಬೇಕು, ಇಷ್ಟೇ ಕಲಿಯಬೇಕು ಎಂಬ ಒತ್ತಡ ಬೇಡವೇ ಬೇಡ. ಹಾಗಂತ ವೇಳಾಪಟ್ಟಿ ಬೇಡವೆಂದಲ್ಲ. ಪಠ್ಯದ ಜೊತೆ- ಜೊತೆಗೆ ಮಕ್ಕಳನ್ನು ಸೃಜನಶೀಲರನ್ನಾಗಿಸುವ ಕಥೆ, ಜಾನಪದ ಆಟ, ಚಿತ್ರರಚನೆ, ನೃತ್ಯ, ಅಭಿನಯ, ಗಣಕಯಂತ್ರದ ಜ್ಞಾನ, ಮಣ್ಣಿನ ಮಾದರಿಗಳ ತಯಾರಿಕೆ, ಕಥೆ, ಕವನ ವಾಚನ-ರಚನಾ ಕೌಶಲ, ಚಿತ್ರ ನೋಡಿ ಕಥೆ ಕವನ ರಚಿಸುವ ಕಲೆ, ವಿನೋದ ಗಣಿತ, ಪವಾಡ ಬಯಲು, ನಾನು ಓದಿದ ಪುಸ್ತಕ, ಒಂದು ದಿನ ಹೊರ ಸಂಚಾರ, ಯೋಗಾಸನ..... ಮೊದಲಾದ ವಿಭಾಗಗಳಲ್ಲಿ ಮಕ್ಕಳಿಗೆ ತಮ್ಮ ಆಸಕ್ತಿಯ ವಿಷಯವನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶ ನೀಡಿ ಆ ಕ್ಷೇತ್ರದಲ್ಲಿ ಅವರನ್ನು ಮೇಲ್ಮಟ್ಟಕ್ಕೊಯ್ಯುವತ್ತ ಪ್ರಯತ್ನ ಗಳಾಗಲಿ. ಹೀಗಾದಾಗ ಮಕ್ಕಳ ರಜಾ ಅವಧಿಯು ತುಂಬಾ ಅರ್ಥಪೂರ್ಣವಾಗುತ್ತದೆ. ಮಕ್ಕಳನ್ನು ಏಕತಾನತೆ ಯಿಂದ ಹೊರತಂದಂತಾಗುತ್ತದೆ.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

### ಬೆಳಕಿನ ಹಾದಿ

ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

-: ಸಂಪಾದಕರು :-

ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.
ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

ಇಂದಿನ ಜಗತ್ತಿನಲ್ಲಿ ಬದುಕಿನ ಮಟ್ಟ ಸುಧಾರಿಸಲು ಕೇವಲ ಕಲಿಕೆಯಲ್ಲ, ಆರ್ಥಿಕ ಜ್ಞಾನವೂ ಅವಶ್ಯಕ. ಹಣದ ಮೌಲ್ಯ, ಬಂಡವಾಳದ ಚಲನೆ, ಉದ್ಯಮಶೀಲತೆ ಮತ್ತು ಹಣಕಾಸಿನ ತಂತ್ರಜ್ಞಾನಗಳನ್ನು ಅರಿಯುವುದರ ಮೂಲಕ ಜೀವನದಲ್ಲಿ ಸಮತೋಲನ ಸಾಧಿಸಬೇಕಾಗಿದೆ. ಈ ಎಲ್ಲದಕ್ಕೂ ಮೂಲವೆಂದರೆ ಕಾಮರ್ಸ್ ಶಿಕ್ಷಣ. ಬಿಲ್ ಪಾವತಿಯಿಂದ ಬಿಸಿನೆಸ್ ಆರಂಭದವರೆಗೆ, ಪ್ರತಿಯೊಂದು ಹಂತದಲ್ಲೂ ಕಾಮರ್ಸ್ ಉಸಿರಾಡುತ್ತಿದೆ. ಯುವಜನತೆ ತಮ್ಮ ಆಸೆ-ಆಕಾಂಕ್ಷೆಗಳನ್ನು ಸಾಕಾರಗೊಳಿಸಲು ಈ ಕ್ಷೇತ್ರವು ನೂರಾರು ಅವಕಾಶಗಳ ಬಾಗಿಲು ತೋರಿಸುತ್ತಿದೆ. ವಾಣಿಜ್ಯ ಅಧ್ಯಯನದ ದಾರಿಗಳೇನು? । ಎಸ್ಸೆಸ್ಸೆಲ್ಸಿ ನಂತರ ಕಾಮರ್ಸ್ ಆಯ್ಕೆ ಏಕೆ?

# ಬ್ಯಾಲೆನ್ಸ್ ಬದುಕಿಗೆ ಕಾಮರ್ಸ್ ಉಸಿರು

ನಮ್ಮ ಬದುಕಿನ ದಾರಿಯು ಹಣದ ಸಂಬಂಧಿತ ವಿಷಯಾದಿಗಳಿಂದ ನಿರೂಪಿತವಾಗುತ್ತಿದ್ದಂತೆ ಲೆಕ್ಕಚಾರ, ಕಾಸು, ಬಡ್ಡಿ ಇತ್ಯಾದಿ ಅಂಶಗಳು ಮಹತ್ವವನ್ನು ಪಡೆದವು. ವಾಣಿಜ್ಯ ಅನ್ನೋದು ದೇಶದ ಮುಖ್ಯ ಅಂಗವೆನ್ನುವುದು ಅರಿವಾಗುತ್ತಿದ್ದಂತೆ ಆ ಕುರಿತಾದ ಅಧ್ಯಯನ ಶಾಸ್ತ್ರವು ಪ್ರಾಚೀನ ಕಾಲದಿಂದಲೇ ತಿಳುವಳಿಕೆಯ ಭಾಗವಾಗಿ, ಕಲಿಕೆಯ ಮೀಮಾಂಸೆ ಯಾಗಿತ್ತು. ಅನುಭವದಿಂದ ವ್ಯಾಪಾರ ನಡೆಸಬಹುದು, ಹಣ ಎಣಿಸಬಹುದು, ಮಾಲು-ಮಳಿಗೆಯನ್ನು ಕಟ್ಟಬಹುದು ಎನ್ನುವುದು ವಾಸ್ತವದ ಗ್ರಹಿಕೆಯಾದರೆ, ವಾಣಿಜ್ಯ ಶಾಸ್ತ್ರವನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡರೇ ಒಬ್ಬ ಯಶಸ್ವಿಯಾದ ಉದ್ಯಮಿಯಾಗಬಹುದು ಅನ್ನುವುದು ಸತ್ಯ. ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆದು ಮುಂದೆ ವಿಷಯದ ಆಯ್ಕೆ ಏನು ಎಂದು ಚಿಂತಿಸುವ ಹಾಗೂ ನಾನು ಕಾಮರ್ಸ್ ಮಾಡಬೇಕು ಅನ್ನೋ ಅದೆಷ್ಟೋ ಮಕ್ಕಳಿಗೆ ವಾಣಿಜ್ಯ ವಿಷಯವನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡರೇ ಬ್ಯಾಂಕ್ ಸಂಬಂಧಿತ ಕೆಲಸಕ್ಕೆ ಹೋಗಬಹುದು ಅನ್ನೋ ತಿಳುವಳಿಕೆ ಉಂಟು ಬಿಟ್ಟರೇ ಬೇರೆ ವಿಚಾರಗಳು ಅಷ್ಟಾಗಿ ದಕ್ಕಿದಂತೆ ತೋರು ವುದಿಲ್ಲ. ಬದಲಿಗೆ ಕಾಮರ್ಸ್ ಅಂದರೆ ಅದರಲ್ಲಿ ಲೆಕ್ಕದ ಕಲಿಕೆ ಇರುತ್ತದೆ ಇಂಗ್ಲಿಷ್ ಚೆನ್ನಾಗಿ ಬರಬೇಕು ಹಾಗಾಗಿ ಅದು ಸಾಧ್ಯವಾಗುವ ಮಾತಲ್ಲ ಅನ್ನೋ ಅದೆಷ್ಟೋ ವಿದ್ಯಾರ್ಥಿಗಳು ವಾಣಿಜ್ಯ ಅಧ್ಯಯನವನ್ನು ಕೈಬಿಟ್ಟು ಬಿಡುವುದು ಉಂಟು.



ಡಾ.ಸುಬ್ರಹ್ಮಣ್ಯ ಸಿ ಕುಂದೂರು
ಲೇಖಕರು, ಮಂಗಳೂರು

Scan For Digital Colourful
HAMPI TIMES E-paper

ವಾಣಿಜ್ಯ ಸಂಯೋಜನೆಯು ಮುಖ್ಯವಾಗಿ ಕನ್ನಡ, ಇಂಗ್ಲೀಷ್, ಹಿಂದಿ, ಸಂಸ್ಕೃತ ಇತ್ಯಾದಿ ಭಾಷಾ ವಿಷಯಗಳ ಜೊತೆಯಲ್ಲಿ ಅರ್ಥಶಾಸ್ತ್ರ, ವ್ಯವಹಾರ ಅಧ್ಯಯನ, ಲೆಕ್ಕಶಾಸ್ತ್ರ, ಮನ:ಶಾಸ್ತ್ರ, ಗಣಕ ವಿಜ್ಞಾನ, ಭೂಗೋಳಶಾಸ್ತ್ರ, ಸಂಖ್ಯಾಶಾಸ್ತ್ರ, ಮೂಲಗಣಿತ, ರಾಜ್ಯಶಾಸ್ತ್ರ, ಸಮಾಜ ಶಾಸ್ತ್ರಗಳನ್ನು ಸೇರಿಕೊಂಡಂತೆ ಒಟ್ಟು ಒಂಭತ್ತು ಸಂಯೋಜನೆಗಳನ್ನು ಒಳಗೊಂಡ ಕಾಮರ್ಸ್ ಎಂಬ ಅಧ್ಯಯನ ಶಿಸ್ತು ಇಂದಿನ ದಿನಮಾನದ ಬೇಡಿಕೆಯ ಕಲಿಕೆಯ ವಿಷಯ ವಸ್ತು ಆಗಿದೆ. ಇಲ್ಲಿನ ವಿಷಯಗಳು ಬಹು ಕಷ್ಟವಾದ ಓದುವುದಕ್ಕೆ ದಕ್ಕದ ವಿಚಾರಗಳೇನು ಅಲ್ಲ. ನಮ್ಮ ತಿಳುವಳಿಕೆಯಲ್ಲಿ ಇರುವ ಅನೇಕ ಸಂಗತಿಗಳಾಗಿವೆ. ತಾಂತ್ರಿಕತೆಯನ್ನು ನಮ್ಮ ಓದಿನ ಜೊತೆಯಲ್ಲಿ ಜೋಡಿಸಿಕೊಳ್ಳುವ ಅಗತ್ಯವಿದೆ ಅಷ್ಟೆ. ನಾಲ್ಕನೇ ತರಗತಿಗೆ ಕಲಿತ ವ್ಯಕ್ತಿಯು ಆಧುನಿಕ ತಾಂತ್ರಿಕತೆಯನ್ನು ಹೊಂದಿರುವ ಮೊಬೈಲ್ ಫೋನ್ ಉಪಯೋಗಿಸುತ್ತಾನೆ ಮತ್ತು ಅದರಲ್ಲಿ ಇರುವ ಸೂಚಕಗಳನ್ನು ಬಳಸಿಕೊಂಡು ವ್ಯವಹರಿಸುತ್ತಾನೆ. ಹಾಗಾಗಿ ತಾಂತ್ರಿಕೆ ಯನ್ನು ಓದಿನಲ್ಲಿ ಅಳವಡಿಸಿಕೊಂಡು ಅಭ್ಯಾಸ ಮಾಡುವುದು ಸುಲಭ ಅಂಬೋದನ್ನು ವಿದ್ಯಾರ್ಥಿಗಳು ಅರ್ಥ ಮಾಡಿಕೊಳ್ಳಬೇಕು. ಕಾಮರ್ಸ್ ಕಲಿಕೆಗೆ ಮನಸ್ಸು ಮತ್ತು ಆಸಕ್ತಿ ಇದ್ದರೇ ಸಾಕು ಬೆಟ್ಟದಷ್ಟು ಸಾಧಿಸಬಹುದು.

ಕಾಮರ್ಸ್ ಅಧ್ಯಯನವು ನಮ್ಮ ಜೀವನದ ದಾರಿಗೆ ಬಲವನ್ನು ಒದಗಿಸುತ್ತದೆಯೇ ಅನ್ನೋದು ಸಹ ಅಷ್ಟೇ ಮುಖ್ಯವಾದ ಸಂಗತಿಯಾಗಿದೆ. ಮುಖ್ಯವಾಗಿ ಎಂಪಿಎಸ್‌ಇ ಮತ್ತು ಯುಪಿಎಸ್‌ಇ ಪರೀಕ್ಷೆಯನ್ನು ಬರೆದು ದೇಶದ ಆಡಳಿತ ವ್ಯವಹಾರಗಳಲ್ಲಿ ಉದ್ಯೋಗವನ್ನು ಪಡೆಯುವುದಕ್ಕೆ ಹೆಚ್ಚಿನ ಬಲವನ್ನು ನೀಡುತ್ತದೆ. ಇವತ್ತು ಮನುಷ್ಯನು ನಗರ ಭಾಗದಲ್ಲಿ ಕಂಪನಿಗಳಲ್ಲಿ ದುಡಿಯುತ್ತಿರುವುದರಿಂದ ಅವನಿಗೆ ಮನರಂಜನೆ ಮತ್ತು ನೆಮ್ಮದಿ ನೀಡುವ ನೆಲೆಯಿಂದ ಟೂರಿಸಂ ಎಂಬ ಪರಿಕಲ್ಪನೆ ಬಹು ವಿಸ್ತಾರವಾದ ವ್ಯಾಪ್ತಿಯನ್ನು ಪಡೆದುಕೊಳ್ಳುತ್ತಿದೆ. ಸರ್ಕಾರಗಳು ಟೂರಿಸಂ ಯೋಜನೆಗಳಿಗೆ ಮಹತ್ವ ಕೊಡುತ್ತಿರುವುದರಿಂದ ಅನೇಕ ಕೆಲಸಗಳು ಕಾಮರ್ಸ್ ಕಲಿತ ವಿದ್ಯಾರ್ಥಿಗಳಿದೆ.



ಲ್ಯಾಬರೋಟರಿಯ ಬಗ್ಗೆ ಕೇಳಿದ್ದೇವೆ. ಆರೋಗ್ಯ ಕೆಟ್ಟಾಗ ರಕ್ತವೋ ಮಗದೊಂದೊ ಪರೀಕ್ಷೆಗೆಂದು ಲ್ಯಾಬ್ಗೆ ಹೋಗಿದ್ದು ಬಿಟ್ಟರೇ ಅಲ್ಲಿನ ಕಾಯಕದ ಬಗೆಗೆ ತಿಳುವಳಿಕೆ ನಮ್ಮಲ್ಲಿ ಇಲ್ಲ, ಮನುಷ್ಯ ರೋಗಗಳ ಪರೀಕ್ಷೆಯಿಂದ ಹಿಡಿದು, ಪ್ರಾಣಿ, ಸಸ್ಯ, ನೀರು, ಮಣ್ಣು, ಗಣಿ ಇತ್ಯಾದಿ ಲ್ಯಾಬ್ಗಳು ಕಾರ್ಯನಿರ್ವಹಿಸುತಿವೆ. ಈ ಲ್ಯಾಬಿನಲ್ಲಿ ಕೆಲಸ ಮಾಡಲು ಸಹ ವಾಣಿಜ್ಯ ಶಾಸ್ತ್ರವನ್ನು ಕಲಿತು ಡಿಎಂಎಲ್ಟಿ ಕೋರ್ಸು ಮಾಡಿದರೆ ಇಂತಹ ಲ್ಯಾಬ್ಗಳಲ್ಲಿ ಕಾರ್ಯನಿರ್ವಹಿಸುವ ನೆಲೆಯಿಂದ ಬದುಕು ನಡೆಸಬಹುದು.

ಮದುವೆಯಿಂದ ಹಿಡಿದು ಸಾವಿನ ತನಕವು ಅನೇಕ ಏಜೆಂಟ್‌ಗಳು ಕಾರ್ಯನಿರ್ವಹಿಸುತ್ತಿದ್ದಾರೆ. ಇಲ್ಲಿ ವಾಣಿಜ್ಯ ವ್ಯವಹಾರಕ್ಕೆ ಅಂದರೆ ಹಣಕಾಸು ಮತ್ತು ನಿರ್ವಹಣೆಗೆ ಸಂಬಂಧಿಸಿದಂತೆ ಸರ್ಕಾರ ಮತ್ತು ಕಂಪೆನಿಗಳಲ್ಲಿ ನೂರಾರು ಗೈಮೆಗಳು ಕಾಮರ್ಸ್ ಕಲಿಕೆಯಿಂದ ನಮ್ಮದಾಗಿಸಿಕೊಳ್ಳಬಹುದು. ಸಾರಿಗೆ ಅನ್ನುವುದು ನಮ್ಮ ದೇಶದ ಪ್ರಮುಖ ಸೇವ ಕ್ಷೇತ್ರ ಇಲ್ಲಿ ನೂರಾರು ಉದ್ಯೋಗಗಳು ಉಂಟು, ವಿಮಾನ ನಿಲ್ದಾಣದಲ್ಲಿ ಹಾಗೂ ವಿಮಾನದ ಸೇವೆಯಲ್ಲಿ, ರೈಲ್ವೆಯಲ್ಲಿ, ಹಡಗಿನಲ್ಲಿ, ಬಸ್ಸಿನಲ್ಲಿ ಅನೇಕ ಉದ್ಯೋಗಗಳು ಇದ್ದು ಇಲ್ಲಿ ಕಾರ್ಯನಿರ್ವಹಿಸಲು ವಾಣಿಜ್ಯ ಕಲಿತ ವಿದ್ಯಾರ್ಥಿಗಳಿಗೆ ಅನುಕೂಲಕಗಳಿವೆ.

ಆಧುನಿಕ ವ್ಯವಹಾರದ ಜಗತ್ತಿನಲ್ಲಿ ಬಹು ಮುಖ್ಯವಾಗಿ ಸಿ.ಎ ಅಂಬೋ ಉದ್ಯೋಗವು ಹಣವನ್ನು ಸ್ಥಾನವನ್ನು ನೀಡಿರುವ ನೆಲೆಯಿಂದ ಮಹತ್ವವನ್ನು ಪಡೆದಿದೆ. ಹಣಕಾಸು, ತೆರಿಗೆ ಅನ್ನೋದು ಜನ ಸಾಮಾನ್ಯರ ಸ್ಪರ್ಶಕ್ಕೂ ಒಳಗಾಗಿದ್ದರಿಂದ ಅವರ ಗಳಿಕೆ-ಉಳಿಕೆ-ಸಾಲ ಇತ್ಯಾದಿಗಳ ಲೆಕ್ಕವನ್ನು ನಿರೂಪಿಸುವ ಕಾಯಕ ವಾಣಿಜ್ಯ ಶಾಸ್ತ್ರವನ್ನು ಕಲಿತು ಸಿ.ಎ ಮಾಡಿದ ವಿದ್ಯಾರ್ಥಿಗಳ ಪಾಲಿಗಿದೆ. ಕಾಲ್ ಸಂಟರ್ ಗಳು ಇವೊತ್ತು ಎಲ್ಲ ಸೇವಾ ವಲಯದಲ್ಲಿ ಅಸ್ತಿತ್ವವನ್ನು ಪಡೆದಿವೆ. ಇಲ್ಲಿ ಅನೇಕ ಹುದ್ದೆಗಳುಂಟು ಹಾಗೆಯೇ ಮಾರ್ಕೆಟಿಂಗ್ ಮ್ಯಾನೇಜರ್, ಎಚ್.ಆರ್ ಮ್ಯಾನೇಜರ್ ಆಗಿ ಅನೇಕ ಕಂಪನಿಗಳಲ್ಲಿ ಮತ್ತು ಸರ್ಕಾರದ ಇಲಾಖೆಗಳಲ್ಲಿ ಕಾಮರ್ಸ್ ಕಲಿತವರಿಗೆ ಅವಕಾಶವಿದೆ.

ನಮಗೆ ತಿಳುವಳಿಕೆ ಇರುವ ಬ್ಯಾಂಕ್ ಅನ್ನೋ ಕ್ಷೇತ್ರದಲ್ಲಿ ಹತ್ತು ಹಲವು ರೀತಿಯ ಹಣಕಾಸಿನ ವ್ಯವಹಾರದಲ್ಲಿ ಮಾನವ ಸಂಪನ್ಮೂಲವು ಬೇಕಾಗಿರುವುದರಿಂದ ಅಲ್ಲಿ ಕಾಮರ್ಸ್ ಕಲಿತ ವಿದ್ಯಾರ್ಥಿಗಳಿಗೆ ಅವಕಾಶಗಳಿವೆ. ಅಧ್ಯಾಪಕನಾಗಿ ಮಕ್ಕಳಿಗೆ ಜ್ಞಾನವನ್ನು ನೀಡುವ ಅದೆಷ್ಟೋ ಅವಕಾಶಗಳಿವೆ. ವಕೀಲನಾಗಿಯು, ರಾಜಕೀಯ ವ್ಯಕ್ತಿಯಾಗಿಯೂ ಈ ಲೋಕದಲ್ಲಿ ತನ್ನ ಅಸ್ಮಿತೆಯನ್ನು ಪಡೆಯಬಹುದು. ಅನೇಕ ಕಡೆಗಳಲ್ಲಿ ಗ್ರಂಥಪಾಲಕರಾಗಿಯು ಬೇರು ಬಿಡಬಹುದು. ನಮ್ಮ ಬದುಕಿನಲ್ಲಿ ಕಂಪ್ಯೂಟರ್ ಬಳಕೆ ಮತ್ತು ಅದರ ಅಗತ್ಯತೆಯು ಬಹು ಮುಖ್ಯವಾದ ಅಂಶವಾಗಿ ತೋರುತ್ತದೆ. ವಾಣಿಜ್ಯಶಾಸ್ತ್ರ ಅಧ್ಯಯನ ಮಾಡಿದವರು ಕಂಪ್ಯೂಟರ್ ತಜ್ಞರಾಗ ಬಹುದು, ಅನೇಕ ಆಪುಗಳನ್ನು ರೂಪಿಸಬಹುದು, ಡಿಸೈನಿಂಗ್ ವಲಯದಲ್ಲಿ ಬಹುಬೇಡಿಕೆಯೂ ಇದೆ. ಹೀಗಿರುವ ಕಾಮರ್ಸ್ ಸಂಯೋಜನೆಯನ್ನು ಅಭ್ಯಾಸಕ್ಕೆ ಒಳಗು ಮಾಡಿ ಲೋಕದಲ್ಲಿ ಉದ್ಯಮಿಗಳ ಮಟ್ಟಕ್ಕೆ ಬೆಳೆಯುವ ಅವಕಾಶಗಳಿವೆ. ಓದುವ ಕಾಲದಲ್ಲಿ ಆಯ್ಕೆ ಮಾಡಿಕೊಂಡ ವಿಷಯವನ್ನು ಅತ್ಯಂತ ಶ್ರದ್ಧೆಯಿಂದ ಕಲಿತರೆ ಜಗತ್ತಿನಲ್ಲಿ ನಮ್ಮ ಅಸ್ಮಿತೆಯನ್ನು ಉಳಿಸಬಹುದು.

# ಆರ್ಥಿಕ ಬಿಕ್ಕಟ್ಟಿನಲ್ಲೂ ಅರಳಿದ ಲಕ್ಷ್ಮಿ ಕುಸ್ತಿ

## ಸಹಕಾರದ ನಿರೀಕ್ಷೆಯಲ್ಲಿ ರೈತನ ಮಗಳು ರಾಷ್ಟ್ರೀಯ ಕುಸ್ತಿಪಟು ಲಕ್ಷ್ಮಿ ಸಂಜಯ್ ಪಾಟೀಲ್

ಅಂತರಾಷ್ಟ್ರೀಯ ಮಟ್ಟದ ಕ್ರೀಡಾ ಕ್ಷೇತ್ರಗಳಲ್ಲಿ ದೇಶಕ್ಕೆ ಪದಕಗಳಿಸುವ ಮೂಲಕ ಹಿರಿಮೆ ಎತ್ತಿ ಹಿಡಿಯಬೇಕೆಂಬ ಮಹತ್ತರ ಕನಸು ಹೊಂದಿರುವ ರಾಷ್ಟ್ರೀಯ ಕುಸ್ತಿಪಟು ಲಕ್ಷ್ಮಿ ಸಂಜಯ್ ಪಾಟೀಲ್‌ಗೆ ಈಗಾಗಲೇ ಪಾಲಕರು ಇದ್ದ ಅಷ್ಟಿಷ್ಟು ಆಸ್ತಿಯನ್ನು ಕರಗಿಸಿದ್ದಾರೆ. ಕುಸ್ತಿಯಲ್ಲಿ ಸಾಧನೆಮಾಡುವ ಅರ್ಹತೆ ಇದ್ದರೂ ಎದುರಾಳಿಗಳನ್ನು ಮಣಿಸಲು ಪರಿಪೂರ್ಣವಾಗಿ ತರಬೇತಿ ಪಡೆದುಕೊಳ್ಳಬೇಕಿದೆ. ತರಬೇತಿ ಕೊಡಿಸಲು ಕುಟುಂಬ ಹಣಕಾಸಿನ ತೊಂದರೆ ಎದುರಿಸುತ್ತಿದೆ. ಅನೇಕ ಸ್ಪರ್ಧೆಗಳಲ್ಲಿ ಸಾಧನೆಗೈದ ಲಕ್ಮೀಗೆ ಸರ್ಕಾರ ಹಾಗೂ ಪ್ರೋತ್ಸಾಹ ನೀಡುವವರನ್ನು ಎದುರು ನೋಡುತ್ತಿದ್ದಾಳೆ.

ನನ್ನ ಮಗಳು ಲಕ್ಷ್ಮಿ ಅಂತರಾಷ್ಟ್ರೀಯ ಮಟ್ಟದಲ್ಲಿ ಪದಕಗಳಿಸುವ ಅರ್ಹತೆಯನ್ನು ಹೊಂದಿದ್ದು ಆ ನಿಟ್ಟಿನಲ್ಲಿ ಅಭ್ಯಾಸ ಮುಂದುವರೆಸಿದ್ದು ಅವಳಿಗೆ ಸಹಕಾರಿಯಾಗುವಂತೆ ನಮ್ಮ ಎಲ್ಲಾ ಆಸ್ತಿಪಾಸ್ತಿಗಳನ್ನು ಈಗಾಗಲೇ ಕಳೆದುಕೊಂಡು ಬಾಡಿಗೆ ಮನೆಯಲ್ಲಿ ಜೀವನ ನಡೆಸುತ್ತಿದ್ದೇವೆ ಆದರೂ ಬೇಸರವಿಲ್ಲ ದೇಶಕ್ಕಾಗಿ ಪದಕ ತರಬೇಕೆಂಬುದು ನಮ್ಮ ಕನಸು.

ನಾವು ಮೂಲತಹ ಬೆಳಗಾವಿಯವರು ಹಳಿಯಾಳ ಕುಸ್ತಿ ಹಾಸ್ಟೆಲಿನಲ್ಲಿ ತರಬೇತಿ ಪಡೆಯುತ್ತಿರುವ ನನ್ನ ಮಗಳಿಗಾಗಿ ಬಾಡಿಗೆಮನೆ ಮಾಡಿ ಅವಳಿಗೆ ಮನೆ ಊಟವನ್ನು ಕೊಡುತ್ತಿದ್ದೇವೆ ಅದರ ಪರಿಣಾಮ ರಾಷ್ಟಮಟ್ಟದಲ್ಲಿ ಪದಕ ಬಂದಿವೆ ಇದರ ಹಿಂದೆ ತರಬೇತುದಾರರಾದ ತುಕಾರಾಂ ಗೌಡ ಇವರ ಶ್ರಮವು ಸಾಕ್ಷಿದೆ ಎಂದು ಅಳಲನ್ನು ತೋಡಿ ಕೊಳ್ಳುತ್ತಾರೆ ಕುಸ್ತಿ ಸಾಧಕಿ ಲಕ್ಷ್ಮಿ ಸಂಜಯ್ ಪಾಟೀಲರ ಪೋಷಕರಾದ ತಂದೆ ಸಂಜಯ್ ಪಾಟೀಲ್ ಮತ್ತು ತಾಯಿ ಮಲಪ್ರಭ. ತಂದೆ ರೈತರಾದರೂ ನನ್ನ ಕ್ರೀಡಾ ತರಬೇತಿಗೆ ಬೇಕಾದ ಎಲ್ಲಾ ಸವಲತ್ತನ್ನು ಒದಗಿಸಿ ಕೊಟ್ಟಿದ್ದಾರೆ. 08ನೇ ತರಗತಿ ಓದುವಾಗ ಡಿವೈ ಈ ಎಸ್ ಹಳಿಯಾಳ ಇಲ್ಲಿ ತರಬೇತಿಯನ್ನು ಆರಂಭಿಸಲಾಯಿತು. ನನ್ನ ಅಕ್ಕ ಶೀತಲ್ ಪಾಟೀಲ್ ರವರು ಈ ಮೊದಲೇ ತರಬೇತಿಯನ್ನು ಪಡೆಯುತ್ತಿದ್ದರು ಅವರನ್ನು ನೋಡಿ ಹಾಗೂ ನನ್ನ ತಂದೆಯವರು ಕೂಡ ಕುಸ್ತಿಪಟು ಹಾಗಾಗಿ ನಮ್ಮಲ್ಲಿ ಆಸೆ ಹುಟ್ಟಿದ್ದು ಸಹಜ.



ಡಾ.ಸುಧಾಕರ ಜಿ.ಲಕ್ಕವಳ್ಳಿ
ಲೇಖಕರು 8747969381

Scan For Digital Colourful
HAMPI TIMES E-paper

ಅಂತರಾಷ್ಟ್ರೀಯ ಮಟ್ಟದಲ್ಲಿ ಪದಕಗಳನ್ನು ಗಳಿಸಬೇಕಾದರೆ ವಿಶೇಷ ತರಬೇತಿ ಪಡೆಯುವುದು ಅನಿವಾರ್ಯ ಮತ್ತು ಅವಶ್ಯ.



ಲಕ್ಷ್ಮಿ ಅವರು ಸೂರಜ್ ಸಿಂಗ್ ರಾಜಪಾಲ್ ಕುಸ್ತಿ ಅಖಾಡ ಸೋಣಿಪತ್ ಹರಿಯಾಣದಲ್ಲಿ ತರಬೇತಿಯನ್ನು ಹಾಸ್ಟೆಲ್ ರಜೆ ಇದ್ದಾಗ ಪಡೆಯಲು ಪ್ರಯಾಣ ಬೆಳೆಸುತ್ತಾರೆ ಕನಿಷ್ಠ ಒಂದು ತಿಂಗಳಿಗೆ ಇವರಿಗೆ 20 ರಿಂದ 30 ಸಾವಿರಗಳ ಹಣದ ಅವಶ್ಯಕತೆ ಇರುತ್ತದೆ.

ಸದ್ಯ ಇವರ ಗುರಿ ಅಂತರಾಷ್ಟ್ರೀಯ ಮಟ್ಟದಲ್ಲಿ ಪದಕ ಗಳಿಸಿ ಭಾರತಮಾತೆಯ ಕೊರಳಲ್ಲಿ ಸಿಂಗರಿಸಬೇಕೆಂಬುದು.

ಕರ್ನಾಟಕ ಸರ್ಕಾರವು ಇಂತಹ ಕ್ರೀಡಾಪಟುಗಳನ್ನು ಗುರುತಿಸಿ ಪ್ರತಿ ತಿಂಗಳು ಒಂದಷ್ಟು ಹಣದ ರೂಪದಲ್ಲಿ ಸಹಕಾರ ನೀಡಿದರೆ ಇವರು ಸಾಧಿಸಲು ಸಾಧ್ಯ.

ಸಾಧನೆಯ ಸಲುವಾಗಿ ಇವರ ಪೋಷಕರು ತಮ್ಮಗಿದ್ದ ಜಮೀನನ್ನು ಮಾರಿಕೊಂಡಿದ್ದಾರೆ ಕಷ್ಟಪಟ್ಟು ದುಡಿದು ಇವರನ್ನು ಸಾಕುತ್ತಿದ್ದಾರೆ.

ಪೋಷಕರ ಆಸೆ ಈಡೇರಿಸುವುದು ನಮ್ಮ ಕರ್ತವ್ಯ ನನ್ನ ಕ್ರೀಡಾ ಪ್ರಯಾಣದಲ್ಲಿ ತುಕಾರಾಂ ಸರ್ ರವರು ಸಾಕಷ್ಟು ಸಹಕಾರವನ್ನು ನೀಡಿದ್ದಾರೆ ಜೊತೆಜೊತೆಗೆ ಹಳಿಯಾಳದ ಶಾಸಕರಾದ ಆರ್ ವಿ ದೇಶಪಾಂಡೆ ಸರ್ ಅವರು ಹಾಗೂ ಊರಿನ ಜನ ಸ್ಥಳೀಯ ಸಂಘ ಸಂಸ್ಥೆಗಳು ಸಹಕಾರವನ್ನು ನೀಡಿದ್ದಾರೆ ಅವರಿಗೆ ಕೃತಜ್ಞತೆಗಳನ್ನು ಅರ್ಪಿಸುತ್ತಾರೆ ಸಾಧಕಿ ಲಕ್ಷ್ಮಿ.

ಸ್ಥಳೀಯ ಸಂಘ ಸಂಸ್ಥೆಗಳು ಹಾಗೂ ಕಂಪನಿಯವರು, ಪ್ರಾಯೋಜಕರು ಇಂತಹ ಸಾಧಕರ ಕಡೆ ಗಮನ ನೀಡಿ ಸಹಾಯ ಮಾಡಿದ್ದೆ ಆದರೆ ಪದಕ ಗಳಿಸುವುದು ಕಷ್ಟವೇನಲ್ಲ.

ಸಾಧಕಿ ಅಲಗ ಬಸ್ತಿವಾಡ ಬೆಳಗಾವಿ ಇಲ್ಲಿನವರಾಗಿದ್ದು ಸ್ಥಳೀಯ ಶಾಸಕರಾದ ಶ್ರೀಮತಿ ಲಕ್ಷ್ಮಿ ಹೆಬ್ಬಾಳ್ಕರ್ ಇವರು ಸ್ವಲ್ಪ ಮನಸ್ಸು ಮಾಡಿ ಇವರ ಕಡೆ ಸಹಾಯಹಸ್ತ ಚಾಚಬೇಕಾಗಿದೆ.

ಏಕಲವ್ಯ ಪ್ರಶಸ್ತಿಗಾಗಿ ಈಗಾಗಲೇ ಅರ್ಜಿ ಸಲ್ಲಿಸಿದ್ದು ಕ್ರೀಡಾ ದತ್ತು ಯೋಜನೆ ಅಡಿ ಇವರನ್ನು ದತ್ತು ಪಡೆದು ಇವರ ಸಾಧನೆಗೆ ಸಹಕಾರ ನೀಡಬೇಕಾಗಿದ್ದು ಸರ್ಕಾರದ ಕರ್ತವ್ಯ ಅಲ್ಲವೇ?.

ಪೋಷಕರು ತಮ್ಮ ಮಕ್ಕಳು ಯಾವ ಕ್ರೀಡೆಯಲ್ಲಿ ಆಸಕ್ತಿ ಹೊಂದಿದ್ದಾರೆ ಎಂಬುದನ್ನು ಗಮನಿಸಿ ಸರಿಯಾದ ನಿಟ್ಟಿನಲ್ಲಿ ತರಬೇತಿ ನೀಡಿದ್ದೆ ಆದರೆ ಭಾರತಕ್ಕೆ ಪದಕಗಳ ಬರವನ್ನು ನೀಗಿಸಬಹುದು ಅಲ್ಲವೇ?

ಲಕ್ಷ್ಮಿ ಇವರ ಪೋಷಕರು ಸಾಕಷ್ಟು ಆರ್ಥಿಕವಾಗಿ ತೊಂದರೆಯಲ್ಲಿ ಇದ್ದರು ಸಹ ತರಬೇತುದಾರರು ತಿಳಿಸುವ ಎಲ್ಲಾ ವ್ಯವಸ್ಥೆಯನ್ನು ಕಲ್ಪಿಸಿ ಕೊಟ್ಟಿದ್ದಾರೆ. ನೋಡಲು ಸೌಮ್ಯ ಸ್ವಭಾವದ ಕ್ರೀಡಾಪಟು ಕುಸ್ತಿ ಪಂದ್ಯಕ್ಕೆ ಇಳಿದಾಗ ಸಿಂಹಿಣಿ ಮಾದರಿಯಲ್ಲಿ ಎದುರಾಳಿಯನ್ನು ಮಣಿಸಿ ವಿಜಯಶಾಲಿಯಾಗುತ್ತಾರೆ ಎಂದು ತಮ್ಮ ಶಿಷ್ಯೆ ಬಗ್ಗೆ ನುಡಿಯುತ್ತಾರೆ ತರಬೇತುದಾರ ತುಕಾರಾಂ ಗೌಡ. ಸರ್ವರೂ ಇಂತಹ ಸಾಧಕರನ್ನು ಗಮನಿಸಿ ಅವರಿಗೆ ಸಹಾಯ ಮಾಡಬೇಕು ಗೆದ್ದಾಗ ನಮ್ಮವರು ಎನ್ನುವುದಕ್ಕಿಂತ ಕಷ್ಟದಲ್ಲಿದ್ದಾಗ ಸಹಾಯಮಾಡಿ ನಮ್ಮವರೇನಿಸಿಕೊಳ್ಳಬಹುದಲ್ಲವೇ? ಮುಂದಿನ ದಿನಗಳಲ್ಲಿ ಎಲ್ಲರ ಸಹಕಾರ ತಮಗೆ ದೊರೆತು ಅಂತರಾಷ್ಟಮಟ್ಟದಲ್ಲಿ ಪದಕ ತಂದು ಕರ್ನಾಟಕದ ಕೀರ್ತಿಯನ್ನು ಬೆಳಗಬೇಕೆಂದು ಹಾರೈಸುತ್ತೇವೆ.

### ಕ್ರೀಡಾ ಸಾಧನೆಗಳು ಮತ್ತು ಪ್ರಶಸ್ತಿ

2022(ರಾಂಚಿ ಜಾರ್ಖಂಡ್) ರಾಷ್ಟ್ರೀಯ ಕುಸ್ತಿ ಸ್ಪರ್ಧೆ 15 ವರ್ಷ ವಯೋಮಿತಿಯೊಳಗಿನ 54 ದೇಹ ತೂಕ ವಿಭಾಗದಲ್ಲಿ ಕಂಚಿನ ಪದಕ ಪಡೆದಿರುತ್ತಾರೆ.

2023(ಉತ್ತರ ಪ್ರದೇಶ) ರಾಷ್ಟ್ರೀಯ ಕುಸ್ತಿ ಸ್ಪರ್ಧೆ 17 ವಯೋಮಿತಿಯೊಳಗಿನ 57 ಕೆಜಿ ದೇಹ ತೂಕದ ವಿಭಾಗದಲ್ಲಿ ಕಂಚಿನ ಪದಕ.

2023(ದೆಹಲಿ)ಎಸ್ ಜಿ ಎಫ್ ಐ 66 ಮತ್ತು 67ನೇ ರಾಷ್ಟ್ರೀಯ ಸ್ಕೂಲ್ ಗೇಮ್ಸ್ 57 ಕೆಜಿ ದೇಹ ತೂಕ ವಿಭಾಗದಲ್ಲಿ ಬೆಳ್ಳಿ ಮತ್ತು ಕಂಚಿನ ಪದಕ.

2024(ಉತ್ತರಾಖಾಂಡ) ನ್ಯಾಷನಲ್ ರೆಸ್ಲಿಂಗ್ ಚಾಂಪಿಯನ್ಶಿಪ್ 17 ವಯೋಮಿತಿ ಒಳಗಿನ 65 ಕೆಜಿ ದೇಹ ತೂಕ ವಿಭಾಗದಲ್ಲಿ ಕಂಚಿನ ಪದಕ.

2022(ಹರಿಯಾಣ)ಫೆಡರೇಶನ್ ಕಪ್ 15 ವಯೋಮಿತಿ ಒಳಗಿನ ಕುಸ್ತಿ ಸ್ಪರ್ಧೆಯಲ್ಲಿ ಭಾಗವಹಿಸುವಿಕೆ.

2022(ದೆಹಲಿ)ಫೆಡರೇಶನ್ ಕಪ್ 17 ವಯೋಮಿತಿಯೊಳಗಿನ ಕುಸ್ತಿ ಸ್ಪರ್ಧೆಯಲ್ಲಿ ಭಾಗವಹಿಸುವಿಕೆ.

2024(ತಮಿಳುನಾಡು)ಖೇಲೋ ಇಂಡಿಯಾ ಯೂಥ್ ಗೇಮ್ಸ್ ನಲ್ಲಿ ಭಾಗವಹಿಸುವಿಕೆ.

ಒಟ್ಟು 21 ರಾಜ್ಯಮಟ್ಟದ ಕುಸ್ತಿ ಸ್ಪರ್ಧೆಗಳಲ್ಲಿ ಭಾಗವಹಿಸಿ 12 ಚಿನ್ನ,05 ಬೆಳ್ಳಿ ಮತ್ತು 04 ಕಂಚಿನ ಪದಕ ಪಡೆದಿರುತ್ತಾರೆ.

2023 ಮತ್ತು 2024ರ ಮೈಸೂರು ದಸರಾ ಕುಸ್ತಿ ಸ್ಪರ್ಧೆಯಲ್ಲಿ ಭಾಗವಹಿಸಿ 02 ಬಾರಿ 'ದಸರಾ ಕಿಶೋರಿ ಪ್ರಶಸ್ತಿ'ಪಡೆದಿರುತ್ತಾರೆ.

2022 ಹಂಪಿಯಲ್ಲಿ ನಡೆದ ಮುಕ್ತ ಕುಸ್ತಿ ಸ್ಪರ್ಧೆಯಲ್ಲಿ ಭಾಗವಹಿಸಿ 'ಅಂಜನಾದ್ರಿ ಪರ್ವತ ಕೇಸರಿ ಪ್ರಶಸ್ತಿ' ಪಡೆದಿರುತ್ತಾರೆ.

2023 ಬೆಂಗಳೂರು ರಾಮನಗರ ಇಲ್ಲಿ ನಡೆದ ಮುಕ್ತ ಕುಸ್ತಿ ಸ್ಪರ್ಧೆಯಲ್ಲಿ ಭಾಗವಹಿಸಿ 'ಒನಕೆ ಓಬವ್ವ ಪ್ರಶಸ್ತಿ' ಪಡೆದಿರುತ್ತಾರೆ.

Printed by: MANJUNATHA .H .B Published by: A. SHUBHA. Owned by: A. SHUBHA and Printed at: AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at: At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor: BASAPUR BASAVARAJA, PRGI No:KARKAN/2023/88055

## ಕವಿ ಮನಸು

### ಮೃಗದ ಅಂತ್ಯ....!!!



ಹಾಲುಗೆನ್ನೆಯ ಮುದ್ದು
ಮಗುವಿಗೆ
ಆಸೆಯ ತೋರಿಸಿ
ನಯವಂಚಿಸಿ
ಕಾಮದ ಕಣ್ಣಲಿ
ಹೆಕ್ಕಿ ತಿಂದು ಉಸಿರು
ನಿಲ್ಲಿಸಿದ ಕಾಮರೋಗಿ ;
ಕಾಮಂಧನ
ಹೆಡೆಮುರಿ ಕಟ್ಟಲು
ಕಾದು ನಿಂತಿತ್ತು
ತಾಳ್ಮೆಯ ಕಟ್ಟೆಯೊಡೆದ
ಜನಸ್ತೋಮ;
ಕಾನೂನು ಕಾಯುವ
ಸೈನಿಕರ ಕಾರ್ಯನಿಷ್ಠೆಯು
ಚುರುಕು ಪಡೆದು;
ಅನ್ನಪೂರ್ಣೆಯ ರೂಪದಲಿ
ಆರಕ್ಷಕ ಸಿಂಹಿಣಿಯ
ಬುದ್ದಿ ಕೇಳದ
ಮೃಗಕೆ;
ಪಿಸ್ತೂಲಿನಿಂದ
ಸಿಡಿದಿದ್ದು
ಬರೀ ಮದ್ದಲ್ಲ;
ಕೋಟಿ ಕೋಟಿ
ಹೃದಯಗಳ
ಆಕ್ರೋಶದ
ಸಿಡಿಮದ್ದಿನ
ಕೋಪಕೆ
ಮೃಗವೊಂದು
ಮಣ್ಣು ಸೇರಿತು
ಪಿಸ್ತೂಲು
ನ್ಯಾಯ ಒದಗಿಸಿದ್ದು
ಇತಿಹಾಸದ
ಪುಟ ಸೇರಿತು..!!!

– ಕಾಡಜ್ಜಿ ಮಂಜುನಾಥ

visit our website for daily updates
www.hampitimes.com
epaper.hampitimes.com

# ಡೋಪಮೈನ್ ಡಿಟಾಕ್ಸ್ : ಮನಸು ಮರಳಿ ಅರಳಲಿ!

## ಇದು ಯಾವ ರಾಕೆಟ್ ಸೈನ್ಸ್ ಅಲ್ಲ, ಮೊಬೈಲ್ ಬಿಟ್ಟು ಮನಸು ತೆರೆಯುವ ಒಂದು ಸರಳ ಟ್ರಿಕ್!


ನೀವು ಕೊನೆಯ ಬಾರಿ ಮೊಬೈಲ್ ಇಲ್ಲದೆ ಒಂದು ಗಂಟೆ ಕಳೆದಿದ್ದು ಯಾವಾಗ? ಯೋಚಿಸಿ, ಒಂದು ಕ್ಷಣ ತಲೆ ಎತ್ತಿ ನೋಡಿ, ಅಡಿಗೆಮನೆಯಲ್ಲಿ ಅಮ್ಮ ರೊಟ್ಟಿ ತಟ್ಟುತ್ತಿದ್ದಾರೆಯೇ? ಮರಗಳಲ್ಲಿ ಹಕ್ಕಿಗಳು ಚಿಲಿಪಿಲಿಗುಟ್ಟುತ್ತಿವೆಯೇ? ಮನೆಯ ಹೊರಗೆ ಹಸುವಿನ ಕರು "ಅಂಬಾ" ಎನ್ನುತ್ತಿದೆಯೇ! ಈ ಬಿರುಬಿಸಿಲ ಬೇಸಗೆಯಲ್ಲೂ ಮಳೆ ಸುರಿದು ನೆಲ ತಂಪಾಗಿದೆಯೇ! ಇಲ್ಲ, ಒಂದು ರೀಲ್ ಮುಗಿಯುವ ಮೊದಲೇ ಮತ್ತೊಂದಕ್ಕೆ ಜಿಗಿಯುವ ಕಪಿಮನಸ್ಸಿಗೆ ಸುತ್ತಲಿನ ಪರಿವೆಯೇ ಇಲ್ಲವಾಗಿದೆ, ಅಲ್ವೇ?

ಸೋಷಿಯಲ್ ಮೀಡಿಯಾದ ಸುಂಟರಗಾಳಿಯಲ್ಲಿ ಸಿಕ್ಕಿಹಾಕಿಕೊಂಡು, ಲೈಕ್‌ಗಳ, ಕಾಮೆಂಟ್‌ಗಳ ಲೆಕ್ಕಾಚಾರದಲ್ಲಿ ಹೂತುಹೋಗಿದ್ದೇವೆ!, ಇದೆಲ್ಲ ಈಗ ನಮ್ಮ ದಿನಚರಿಯ ಭಾಗವಾಗಿ ಬಿಟ್ಟಿದೆ. ಆದರೆ ಈ ಮೊಬೈಲ್ ಮಾಯೆಯ ಜಗತ್ತಿನಲ್ಲಿ ಸಂತೋಷವಿದೆ ಎಂದು ಭಾವಿಸುವ ನಮಗೆ, ಒಂದು ಚಿಕ್ಕ ರಹಸ್ಯ ತಿಳಿದರೆ ಆಶ್ಚರ್ಯವಾಗಬಹುದು: ಇದು ನಿಜವಾದ ಖುಷಿಯಲ್ಲ, ಇದೊಂದು ಡೋಪಮೈನ್ ಜಾಲವಷ್ಟೇ!

### ಡೋಪಮೈನ್:ಸಂತೋಷದಜಾದೂಗಾರನೋ,ಜಾಲಗಾರನೋ?

ಡೋಪಮೈನ್ ಎಂದರೆ ನಮ್ಮ ಮೆದುಳಿನ ಒಳಗೊಬ್ಬ ಚತುರ ರಸಾಯನಿಕ ಜಾದೂಗಾರ. ಪ್ರತಿ ಸ್ಕ್ರಾಲ್‌ಗೆ, ಪ್ರತಿ "ಡಿಂಗ್" ನೋಟಿಫಿಕೇಷನ್‌ಗೆ ಇವನು ಒಂದು ಚಿಕ್ಕ ಖುಷಿಯ ಛೂಮಂತ್ರ ಹಾಕುತ್ತಾನೆ, ಮತ್ತೆ ಒಂದು ರೀಲ್, ಮತ್ತೊಂದು ಲೈಕ್ ಬೇಕೆಂಬ ಆಸೆ ಉಂಟಾಗುತ್ತದೆ. ಆದರೆ ಈ ಖುಷಿ ಒಂದು ಚೀಟಿಂಗ್ ಗಿರಾಕಿಯಂತೆ. ತಾತ್ಕಾಲಿಕವಾಗಿ ಬಂದು, ಹೊಗೆಯಂತೆ ಕಣ್ಮರೆಯಾಗುತ್ತದೆ. ಆಧುನಿಕ ಜೀವನದಲ್ಲಿ ಈ ಡೋಪಮೈನ್ ಜಾದೂಗಾರನಿಗೆ ಫುಲ್‌ಟೈಮ್ ಕೆಲಸ ಸಿಕ್ಕಿದೆ: ರೀಲ್ಸ್, ಗೇಮ್‌ಗಳು, ಯೂಟ್ಯೂಬ್ ವಿಡಿಯೋಗಳು, ಜಂಕ್ ಫುಡ್ ಇವೆಲ್ಲವೂ ಇವನು ನಮ್ಮತ್ತ ಎಸೆಯುವ ಆಟಿಕೆಗಳು. ಇದರಿಂದ ಮೆದುಳು ತಕ್ಷಣದ ಖುಷಿಯ ಗೀಳಿಗೆ ಒಗ್ಗಿಕೊಂಡು, "ಪುಸ್ತಕ ಓದಿ ಸಂತೋಷ ಪಡೆಯೋಣವೇ?" ಎಂದರೆ "ಅಯ್ಯೋ, ಅದು ಬೇಸರದ ಕೆಲಸ" ಎಂದು ತಿರಸ್ಕರಿಸುತ್ತದೆ.

ನನ್ನ ಸ್ನೇಹಿತ ರಮೇಶ್‌ನ ಕತೆ ಇಲ್ಲಿ ಹೇಳಲೇಬೇಕು. ಒಂದು ದಿನ ಆತ ನಿರ್ಧರಿಸಿದ, "ಇಂದು ಬೆಳಗ್ಗೆ ಫೋನ್ ಮುಟ್ಟುವುದಿಲ್ಲ!" ಆದರೆ ಹತ್ತು ನಿಮಿಷದಲ್ಲಿ ಆತನ ಮನಸ್ಸು ಕುತರ್ಕ ಮಾಡಿತು. ಒಂದೇ ಒಂದು ಫೇಸ್‌ಬುಕ್ ಪೋಸ್ಟ್, ಎಂದು ಮೊಬೈಲ್ ಹಿಡಿದವನು ಗಂಟೆಗಳ ಕಾಲ ಆತ ರೀಲ್ಸ್ ಸುಳಿಯಲ್ಲಿ ಸಿಕ್ಕಿಬಿದ್ದಿದ್ದ! ಆದರೆ, ಮತ್ತೊಂದು ದಿನ ಆತ ಫೋನ್‌ನ್ನು ಅಡಿಗೆಯ ಶೆಲ್ಫ್‌ನಲ್ಲಿ ಇಟ್ಟು, ಒಂದು ಚಹಾ ಮಾಡಿ ಕುಡಿದು, ದಿನದ ಕೆಲಸಗಳ ಪಟ್ಟಿಯನ್ನು ಕಾಗದದಲ್ಲಿ ಬರೆದ. "ಅಬ್ಬಾ, ಎಂಥ ಸಮಾಧಾನ!" ಎಂದು ಆತ ಆ ದಿನ ಮೊದಲ ಬಾರಿಗೆ ತನ್ನ ನಡೆಯನ್ನು ಮೆಚ್ಚಿಕೊಂಡ!



ಡಾ. ಎಸ್.ಎಂ. ಶಶಿಧರ್
ಟೆಕ್ ಪರಿಣತರು

Scan For Digital Colourful
HAMPI TIMES E-paper

ನಾನು ವಾರದಲ್ಲಿ ಒಂದೆರಡು ದಿನವಾದರೂ ಬಸ್‌ನಲ್ಲಿ ಪ್ರಯಾಣ ಮಾಡುತ್ತೇನೆ, ಆ ದಿನ ಒಬ್ಬ ತಾಯಿ ತನ್ನ ಎರಡು ವರ್ಷದ ಮಗುವಿನೊಂದಿಗೆ ಕುಳಿತಿದ್ದಳು. ಆ ಚಿಕ್ಕ ಪೋರನ ಕೈಯಲ್ಲಿ ಮೊಬೈಲ್–ರೀಲ್ಸ್ ನೋಡುತ್ತಾ, ಒಂದು ವೀಡಿಯೊ ಮುಗಿಯುವ ಮೊದಲೇ ಸ್ಕ್ರೀನ್ ಮೇಲೆ ಕೈ ಒತ್ತಿ ಮೇಲಕ್ಕೆ



ತಳ್ಳುವ ಮೂಲಕ ಸ್ಕ್ರೋಲ್ ಮಾಡುತ್ತಿತ್ತು! ಚಿಕ್ಕ ಮಗುವಿಗೂ ರೀಲ್ಸ್ ಗೀಳು, ನಾವು ದೊಡ್ಡವರ ಬಗ್ಗೆ ಇನ್ನೇನು ಹೇಳೋದು? ಬಸ್‌ನಲ್ಲಿ ಎಲ್ಲರೂ ತಲೆತಗ್ಗಿಸಿ ಮೊಬೈಲ್ಗಳಲ್ಲಿ ಮುಳುಗಿದ್ದರು. ಯಾರೊಬ್ಬರೂ ಕಿಟಕಿಯ ಮೂಲಕ ಕಾಣುತ್ತಿದ್ದ ಸುಂದರ ನಾರೀಹಳ್ಳದ ದೃಶ್ಯವನ್ನು ನೋಡಲೇ ಇಲ್ಲ! ಇದು ಮೊಬೈಲ್ ಮಾಯೆಯ ಜಗತ್ತು ಮತ್ತು ಇದರಿಂದ ಬಿಡುಗಡೆಗೆ ಒಂದೇ ಮಾರ್ಗ: 'ಡೋಪಮೈನ್ ಡಿಟಾಕ್ಸ್'.

### ಮೆದುಳಿಗೆ ಒಂದು ರಿಫ್ರೆಶ್ ಬಟನ್

ಡೋಪಮೈನ್ ಡಿಟಾಕ್ಸ್ ಎಂದರೆ 'ತಕ್ಷಣದ ಖುಷಿ' ನೀಡುವ ಎಲ್ಲ ಚಟುವಟಿಕೆಗಳಿಗೆ ಒಂದು ಚಿಕ್ಕ "ಟಾಟಾ–ಬೈ–ಬೈ" ಹೇಳುವುದು, ಮೊಬೈಲ್, ಟಿವಿ, ಸೋಷಿಯಲ್ ಮೀಡಿಯಾ. 'ಡಿಟಾಕ್ಸ್' ಎಂಬ ಪದವನ್ನು ಇಲ್ಲಿ ಬಳಸಲಾಗಿದೆ ಏಕೆಂದರೆ ಇದು ದೇಹದಿಂದ ವಿಷವನ್ನು ತೆಗೆದುಹಾಕುವಂತೆ, ಮನಸ್ಸಿನಿಂದ ಡಿಜಿಟಲ್ ಒತ್ತಡ ಮತ್ತು ಅತಿಯಾದ ಉತ್ತೇಜನವನ್ನು ಶುದ್ಧೀಕರಿಸುವ ಪ್ರಕ್ರಿಯೆಯನ್ನು ಸೂಚಿಸುತ್ತದೆ .ಇದು ಮೆದುಳನ್ನು ರೀಸೆಟ್ ಮಾಡಿ, "ಅರೆ, ಜೀವನದಲ್ಲಿ ನಿಜವಾದ ಖುಷಿ ಇದೆಯಲ್ಲ!" ಎಂಬ ಭಾವನೆಯನ್ನು ಮರಳಿ ತರುತ್ತದೆ. ಇದು ಯಾವ ರಾಕೆಟ್ ಸೈನ್ಸ್ ಅಲ್ಲ, ಮೊಬೈಲ್ ಬಿಟ್ಟು ಮನಸು ತೆರೆಯುವ ಒಂದು ಸರಳ ಟ್ರಿಕ್!

### ಡಿಟಾಕ್ಸ್ ಮಾಡುವ ಟ್ರಿಕ್‌ಗಳು:

* **ಸಣ್ಣದಾಗಿ ಶುರು:** ಮೊದಲು ಒಂದು ಗಂಟೆ ಫೋನ್ ಮುಟ್ಟದಿರಿ. ಕ್ರಮೇಣ ಒಂದು ದಿನಕ್ಕೆ ವಿಸ್ತರಿಸಿ, ನಿಮ್ಮ ಮೆದುಳು "ಅಯ್ಯೋ, ಇವನು ಸೀರಿಯಸ್ ಆಗಿಬಿಟ್ಟನಲ್ಲ!" ಎಂದು ಶಾಕ್ ಆಗುತ್ತದೆ.
* **ತೊಡಕು ಸೇರಿಸಿ:** ಫೋನ್‌ನ್ನು ಬೇರೆ ಕೊಠಡಿಯಲ್ಲಿ ಇರಿಸಿ.ತೆಗೆದುಕೊಳ್ಳಲು ಎದ್ದು ಹೋಗುವ ಸೋಮಾರಿತನವೇ ನಿಮ್ಮ ಸೂಪರ್‌ಮ್ಯಾನ್ ಕವಚ! ನನ್ನ ಸ್ನೇಹಿತ ರವೀಂದ್ರ ಫೋನ್‌ನ್ನು ಅಡಿಗೆ ಡಬ್ಬದಲ್ಲಿ ಬಚ್ಚಿಟ್ಟ. ಆ ದಿನ ಆತ ಫೋನ್ ಮುಟ್ಟಲೇ ಇಲ್ಲ!
* **ಪರ್ಯಾಯ ಚಟುವಟಿಕೆ:** ಪುಸ್ತಕ ಓದಿ, ಉದ್ಯಾನದಲ್ಲಿ ತಿರುಗಾಡಿ, ಅಡುಗೆ ಮಾಡಿ, ಅಥವಾ ನಿಮ್ಮ ಅಜ್ಜಿಗೆ "ನಿನ್ನ ಆ ಲಡ್ಡು ರೆಸಿಪಿ ಹೇಳು" ಎಂದು ಕೇಳಿ.
* **ಸಂಕಲ್ಪ ಇರಲಿ:** "ಇಂದು ಮನಸ್ಸಿಗೆ ಶಾಂತಿ ಕೊಡ್ತೀನಿ" ಎಂದು ಘೋಷಿಸಿ, ನಿಮ್ಮ ಮೆದುಳು ಒಂದು ಕ್ಷಣ "ಅರೆ, ಇವನು ಯೋಗಿ ಆಗಿಬಿಟ್ಟನೇ?" ಎಂದು ಆಶ್ಚರ್ಯಪಡುತ್ತದೆ.
* **ತಾಳ್ಮೆ ತಂದುಕೊಳ್ಳಿ:** ಮೊದಲ ದಿನ "ಒಂದೇ ಒಂದು ರೀಲ್" ಎಂದು ಮನಸ್ಸು ಚೇಷ್ಟೆ ಶುರು ಮಾಡಬಹುದು. ಆದರೆ ಎರಡು ದಿನದಲ್ಲಿ ಫಲಿತಾಂಶ ಗೋಚರಿಸುತ್ತದೆ. ನಂಬಿ ನೋಡಿ!

### ಡಿಟಾಕ್ಸ್‌ನ ಲಾಭ: ಮೆದುಳಿಗೆ ಒಂದು ಜಾದೂ

* **ಮನಸ್ಸಿನ ಸ್ಪಷ್ಟತೆ:** ಒತ್ತಡ ತಗ್ಗಿ, ಗೊಂದಲದ ಮೋಡ ಕರಗುತ್ತದೆ.
* **ಗಮನ ಶಕ್ತಿ:** ಕೆಲಸದಲ್ಲಿ ಏಕಾಗ್ರತೆ ಲೇಸರ್ ತರ ತೀಕ್ಷ್ಣವಾಗುತ್ತದೆ.
* **ನಿಜವಾದ ಖುಷಿ:** ಪಕ್ಷಿಗಳ ಚಿಲಿಪಿಲಿ, ಚಹಾದ ಸುಗಂಧ. ಇವುಗಳಲ್ಲಿ ಜೀವನದ ಸವಿ ಕಾಣುತ್ತೀರಿ.
* **ನಿದ್ರೆಯ ಜಾದೂ:** ರಾತ್ರಿ ಫೋನ್ ಬಿಟ್ಟರೆ, ಆಳವಾದ ನಿದ್ರೆಯಲ್ಲಿ ಕನಸುಗಳ ಜಗತ್ತು ತೆರೆದುಕೊಳ್ಳುತ್ತದೆ.

### ತಕ್ಷಣದ ಖುಷಿಯ ಓಟಕ್ಕೆ ಬ್ರೇಕ್

ಈ ತಕ್ಷಣದ ಆನಂದದ ಓಟ ನಮ್ಮ ದೀರ್ಘಕಾಲೀನ ಗುರಿಗಳಿಗೆ ದೊಡ್ಡ ಶತ್ರು. ಒಂದು ಕೆರೆ ನಿರ್ಮಿಸಲು ತಿಂಗಳುಗಳೇ ಬೇಕು. ಆದರೆ ರೀಲ್ಸ್ ಹಾಗಲ್ಲ! ಒಂದು ವೀಡಿಯೊ ಮುಗಿದರೆ ಮತ್ತೊಂದು ಬೇಕೆಂಬ ತುಡಿತ ಶುರುವಾಗುತ್ತದೆ. ಆದರೆ ಯೋಚಿಸಿ, ಅಮೆಜಾನ್ ಕಂಪನಿ 9 ವರ್ಷ ಲಾಭ ಗಳಿಸದಿದ್ದರೂ ತಾಳ್ಮೆಯಿಂದ ಬೆಳೆದು ಜಗತ್ತನ್ನೇ ಆಳುತ್ತಿದೆ. ಡಿಟಾಕ್ಸ್ ಮಾಡಿ ತಾಳ್ಮೆಯ ಶಕ್ತಿಯನ್ನು ಮರಳಿ ಪಡೆಯಿರಿ, ನಿಮ್ಮ ಜೀವನದ ದೊಡ್ಡ ಕನಸುಗಳು ಕಾಯುತ್ತಿವೆ!

### 'ಇಈ' ಚಟುವಟಿಕೆಗಳು

ಶಾಂತಗೊಳಿಸುವ ಚಟುವಟಿಕೆಗಳು ನಮ್ಮ ಮನಸ್ಸನ್ನು "ಇಲ್ಲಿ–ಈ ಕ್ಷಣ" ("ಇಈ") ಇರಿಸಿ, ಆಳವಾದ ತೃಪ್ತಿ ನೀಡುತ್ತವೆ. ಉದಾಹರಣೆಗೆ, ಊಟ ಮಾಡುವಾಗ ಪ್ರತಿ ತುತ್ತಿನ ರುಚಿಯನ್ನು ಗಮನಿಸಿ, ಅದರ ಸಿಹಿ, ಖಾರ, ಪರಿಮಳವನ್ನು ಆಸ್ವಾದಿಸಿ; ಇದು ಮನಸ್ಸನ್ನು ಫೋನ್‌ನ ಓಟದಿಂದ ಮುಕ್ತಗೊಳಿಸಿ ಈ ಕ್ಷಣದಲ್ಲಿ ಇರಿಸುತ್ತದೆ. ಇಲ್ಲವೇ, ಐದು ನಿಮಿಷ ಶಾಂತವಾಗಿ ಕುಳಿತು ಉಸಿರಾಟವನ್ನು ಗಮನಿಸಿ, ಪಕ್ಷಿಗಳ ಚಿಲಿಪಿಲಿ, ಗಾಳಿಯ ಸ್ಪರ್ಶವನ್ನು ಅನುಭವಿಸಿ. ಇಂತಹ ಸರಳ ಚಟುವಟಿಕೆಗಳು ಮೊಬೈಲ್‌ನ ಪ್ರಚೋದನೆಗೆ ವಿರುದ್ಧವಾಗಿ, ನಮಗೆ ನಿಜವಾದ ಶಾಂತಿ ಮತ್ತು ಸ್ಪಷ್ಟತೆಯನ್ನು ತರುತ್ತವೆ.

### ಒಂದು ದಿನದ ಡಿಟಾಕ್ಸ್ ಚಾಲೆಂಜ್

**ಇಂದು ಒಂದು ದಿನ ಪ್ರಯತ್ನಿಸಿ:** ಬೆಳಗ್ಗೆ ಫೋನ್ ಮುಟ್ಟದೆ, ಒಂದು ಗ್ಲಾಸ್ ನೀರು ಕುಡಿದು, ಐದು ನಿಮಿಷ ಧ್ಯಾನ ಮಾಡಿ. ದಿನವಿಡೀ ಫೋನ್ ಕಡಿಮೆ ಮಾಡಿ, ಸಂಜೆ ಒಂದು ಚಿಕ್ಕ ನಡಿಗೆ ಹೋಗಿ. ರಾತ್ರಿ ಮಲಗುವಾಗ "ಅಬ್ಬಾ, ಎಂಥ ನಿರಾಳತೆ!" ಎಂದು ನೀವೇ ಆಶ್ಚರ್ಯಪಡುತ್ತೀರಿ. ಇದೇ ಡಿಟಾಕ್ಸ್‌ನ ಜಾದೂಗಾರಿಕೆ!

### ನೀವು ಫೋನ್ ಹಿಡಿದಿದ್ದೀರಾ? ಅಥವಾ ಅದು ನಿಮ್ಮನ್ನು ಹಿಡಿದಿದೆಯೇ?

ತಂತ್ರಜ್ಞಾನದ ಗುಲಾಮರಾಗದೆ, ಅದನ್ನು ಸರಿಯಾಗಿ ಬಳಸಿ ಜೀವನವನ್ನು ಸುಂದರಗೊಳಿಸಿ. ಒಂದು ಅಧ್ಯಯನ ಹೇಳುತ್ತದೆ. 80% ಯುವಕರು ದಿನಕ್ಕೆ ನಾಲ್ಕು ಗಂಟೆಗಿಂತ ಹೆಚ್ಚು ಮೊಬೈಲ್ ಬಳಸುತ್ತಾರೆ, ಆದರೆ, ಡಿಟಾಕ್ಸ್ ಮಾಡಿದವರಲ್ಲಿ ಒತ್ತಡ 25% ಕಡಿಮೆಯಾಗಿದೆ. ಡೋಪಮೈನ್ ಡಿಟಾಕ್ಸ್ ಎಂದರೆ ಫೋನ್‌ಗೆ ಶಾಶ್ವತ ಗುಡ್‌ಬೈ ಹೇಳುವುದಲ್ಲ; ಮನಸ್ಸನ್ನು ಮತ್ತೆ ನಮ್ಮದಾಗಿಸಿಕೊಳ್ಳುವ ಒಂದು ಚಿಕ್ಕ ಆಟ. ಒಮ್ಮೆ ಪ್ರಯತ್ನಿಸಿ, ಮೊಬೈಲ್ ಬಿಟ್ಟು ಮನಸು ತೆರೆಯಿರಿ. ಹೊಸ ಜಗತ್ತೊಂದು ನಿಮಗಾಗಿ ಕಾದಿದೆ, ಮತ್ತು ನಿಮ್ಮ ಮೆದುಳು "ಥ್ಯಾಂಕ್ಸ್ ಬ್ರೋ!" ಎಂದು ನಗುತ್ತದೆ!

# ನೀರ ತಾವರೆ ಅಕ್ಕಮಹಾದೇವಿ

ಗಿರಿಜಾತೆ ಯಾಜ್ಞೆಯಿಂದಂ ನರಲೋಕಕ್ಕಿಳಿದು ಬಂದು ಭಕ್ತಿಯ ಪುಣ್ಯಧರಗತ ವಿಶುದ್ಧ ವಿಭ್ರಮ ಗುರುತರ ಮುಖವಾದ ಗರ್ಭಮಂ ಪಣ್ಣಿಪರಾರ.



ನಿನ್ನ ನಿರ್ಮಳ ಸಾತ್ವಿಕದ ಸಂಪನ್ನ ಕಳೆಯನ್ನು ಕಳುಹಿ ಧರೆಯೊಳು ಚೆನ್ನೆಯಾಗಿರೆ ಜನಿಸಿ ನೆಲೆ ನಿಷ್ಕಾಮ ಭಕ್ತಿಯಲಿ ಹರನ ಮುಡಿ ವೆಣ್ಣೆಳೆಯ ಪೊರೆಯಲಿಳಿ ವಂತಿಳಿದಳಿ ಳೆಗೆ ತಿದ್ರುದ್ರ ಕನ್ನೆ

**ಶಿವ ಭಕ್ತರ ನೆಲೆಬೀಡು**
**ಶಿವ ದೇವಾಲಯಗಳಬೀಡು**
**ಶಿವ ಭಕುತಿಯ ತವರೂರು**
**ಗುರು ಜಂಗಮರ ತಾಯ್ನಾಡು**
**ಇಂತಪ್ಪ ಉಡುತಡಿಯು ಅಕ್ಕನ ಜನ್ಮಸ್ಥಳವು.**

ನಿರ್ಮಲ ಸುಮತಿ ಎಂಬುವ ಶಿವಭಕ್ತ ದಂಪತಿಗಳ ಪುತ್ರಿಯಾಗಿ ಅಕ್ಕಮಹಾದೇವಿ " ದವನದ ಹುಣ್ಣಿಮೆ " ದಿನ ಜನ್ಮ ತಾಳುತ್ತಾರೆ. ಅವಳು ಶಿಶುವಾಗಿದ್ದಾಗ ನೋಡುವ ಕಣ್ಣು ಪುಣ್ಯ, ಪಾಡುವರ ಜೀಹ್ವಾಮೃತ, ಆಡಿಸುವ ರವಯವದ ಚೇತನವಾಗಿ ಕಂಡುಬರುತ್ತಾಳೆ. ತನ್ನ ಎಂಟನೇ ವಯಸ್ಸಿನಲ್ಲಿ ಶೈವಾಚಾರ್ಯರಿಂದ ಶಿವ ದೀಕ್ಷೆ ನಡೆಯುವುದು.

"ಉರಕ್ಕೆ ಜವ್ವನಗಳು ಬಾರದ ಮುನ್ನ, ಮನಕ್ಕೆ ನಾಚಿಕೆಗಳು ತೋರದ ಮುನ್ನ, ನಮ್ಮವರಂದೇ ಮದುವೆಯ ಮಾಡಿದರು ಶ್ರೀಶೈಲ ಚೆನ್ನಮಲ್ಲಿಕಾರ್ಜುನಂಗೆ", ಹೆಂಗೂಸು ಎಂಬ ಭಾವ ತೋರದ ಮುನ್ನ, ನಮ್ಮವರಂದೆ ಮದುವೆಯ ಮಾಡಿದರು" ಎಂಬ ಮಾತಿನಲ್ಲಿ ಅಕ್ಕ ತಮಗೆ ಲಿಂಗ ದೀಕ್ಷೆಯಾದ್ದುದ್ದನ್ನು ವಿವರಿಸಿದ್ದಾರೆ.

**"ನರಜನ್ಮವ ತೊಡೆದು,**
**ಹರಜನ್ಮವ ಮಾಡಿದ ಗುರುವೇ,**
**ಭವ ಬಂಧನವ ಬಿಡಿಸಿ**
**ಪರಮ ಸುಖವ ತೋರಿದ ಗುರುವೇ,**
**ಭವಿ ಎಂಬುದ ತೊಡೆದು**
**ಭಕ್ತೆ ಎಂದೆನಿಸಿದ ಗುರುವೇ,**
**ಚೆನ್ನಮಲ್ಲಿಕಾರ್ಜುನನ ತಂದು**
**ಎನ್ನ ವಶಕ್ಕೆ ಕೊಟ್ಟ ಗುರುವೇ!"**

ಹೀಗೆ ಅಕ್ಕ ತಮ್ಮನ್ನು ಉದ್ಧಾರ ಮಾಡಿದ ಗುರುವಿನ ಸ್ಮರಣೆಯನ್ನು, ಮಹಿಮೆಯನ್ನು ತಮ್ಮವಚನದಲ್ಲಿ ವಿವರಿಸಿದ್ದಾರೆ."ಗುರು ಸಾಕ್ಷಾತ್ ಪರಬ್ರಹ್ಮ"ಎಂಬ ನಂಬಿಕೆ ಅವಳದು. ಹೀಗೆ ಮಹದೇವಿಯಕ್ಕನಿಗೆ ಗುರುವಿನ ಕರುಣೋದಯವಾಗುತ್ತದೆ. ಅಂದಿನಿಂದ ಅವಳು ಶುದ್ಧ, ಪವಿತ್ರ, ನಿಷ್ಠಾವಂತ ಭಕ್ತಾಳಾಗುತ್ತಾಳೆ. ಅವಳ ಭಕ್ತಿಗೆ ಪಾರವೇ ಇಲ್ಲ. ಶ್ರದ್ದೆಗೆ ಕೊನೆ ಇಲ್ಲ. ಚೆನ್ನಮಲ್ಲಿಕಾರ್ಜುನನೇ ಅವಳ ಸರ್ವಸ್ವ, ಅವಳ ಸರ್ವಸ್ವವೂ ಅವನಿಗೆ ಅರ್ಪಿತ ಮತ್ತು ಮೀಸಲು.

"ಮನ ಎನ್ನದು, ತನುವೆನ್ನದು ಧನವೆನ್ನದು ಎನ್ನೆನಯ್ಯ."
ತನು ಮನ– ಧನ ನಿಮ್ಮದೆಂದು ತಾನು ನಿಶ್ಚಿಂತಳಾಗಿರುವೆನೆಂದು ಭಾವಿಸುತ್ತಾಳೆ, ನೀನು ಹುಟ್ಟಿಸಿದಲ್ಲಿ ಹುಟ್ಟಿದೆ, ನೀನು ಹೋಗೆಯಂದಲ್ಲಿ ಹೋಗೆಂದಡೆ ಹೋದೆನಯ್ಯ! ನೀನು ಬೆಳೆಸಿದಲ್ಲಿ ಬೆಳೆದಿದ್ದೇನೆ, ನಿಮ್ಮ ತೊತ್ತಿನ ಮಗಳಾಗಿ ನನಗೆ ಯಾವ ಸ್ವತಂತ್ರವೂ ಇಲ್ಲ, ಎಲ್ಲ ನೀನಿರಿಸಿದಂತೆ ಇದ್ದೇನೆ. ಎಂಬ ಸರ್ವ ಸಮರ್ಪಣ ಭಾವ ಅಕ್ಕನಲ್ಲಿ ಉಂಟಾಗುತ್ತದೆ. ಹೀಗೆ ಅಚಲವಾದ ಶ್ರದ್ಧಾ ಭಕ್ತಿಗಳು ಚನ್ನಮಲ್ಲಿಕಾರ್ಜುನನಲ್ಲಿ ಮೈಗೂಡುತ್ತದೆ. ಜಂಗಮಸೇವೆ, ಲಿಂಗಪೂಜೆ, ದಾಸೋಹ ಮಾಡುತ್ತಾ ಅವಳ ಭಕ್ತಿ ಬೆಳೆಯುತ್ತಾ ಹೋಗುತ್ತದೆ.

ಹೀಗಿರಲು ಒಂದು ದಿನ ಊರ ದೊರೆ ಕೌಶಿಕನೊಮ್ಮೆ ವೈಹಾಳಿಯಿಂದ ಮನೆಯ ಬಾಗಿಲಲ್ಲಿ ನಿಂತಿದ್ದ ಮಹಾದೇವಿಯನ್ನು ನೋಡಿದನು. ಅವಳ ಸ್ಪುರದ್ರೂಪಕ್ಕೆ, ಸುರ ಸೌಂದರ್ಯಕ್ಕೆ ಮನಸೋತನು. ಬಿರುಗಾಳಿಗೆ ಸಿಕ್ಕ ಹಡಗದಂತೆ ಹೊಯ್ದಾಡಿತವನೆದೆ. 'ಮಹಾದೇವಿಯಂ ಕಂಡೊಡುಳಿವೆನಲ್ಲದೊಡಳಿವೆ ವೆನೆಂದು ಹಾಸಿಗೆ ಹಿಡಿದ ಕೌಶಿಕ. ಅವನ ಪರವಾಗಿ ಹೆಗ್ಗಡತಿಯರು ಬಂದರು. ಮಹಾದೇವಿಯ ತಂದೆ ತಾಯಿಗಳಿಗೆ ಕೌಶಿಕನ ಅಭಿಲಾಷೆಯನ್ನು ತಿಳಿಸಿದರು. ನಿರ್ಮಲ ಸುಮತಿಯರಿಗೆ ನಿಂತ ನೆಲವೇ ಕುಸಿದ ಹಾಗಾಯಿತು. ನಿರಾಕರಣದ ಪರಿಣಾಮ ತಿಳಿದುದೆ ಆಗಿದ್ದಿತು. ಅಕ್ಕಮಹಾದೇವಿಗೂ ದಿಕ್ಕು ತೋಚದಾಯಿತು.

**"ಹಿಂದಣ ಹಳ್ಳ, ಮುಂದಣ ತೊರೆ;**
**ಸಲ್ಲುವ ಪರಿಯಂತು ಹೇಳಾ?**
**ಹಿಂದಣ ಕೆರೆ, ಮುಂದಣ ಬಲೆ;**
**ಹದುಳ ವಿನ್ನೆಲ್ಲಿಯದು ಹೇಳ?,**


ನೀನಿಕ್ಕಿದ ಮಾಯೆ ಕೊಲ್ಲು ತಿಪ್ಪುದು, ಕಾಯಯ್ಯ ಕಾಯಯ್ಯ ಚೆನ್ನಮಲ್ಲಿಕಾರ್ಜುನ" ಎಂದು ಮೊರೆ ಇಟ್ಟಳು.

ಮೊದಲೇ ಮಾನವರನ್ನು ಮದುವೆಯಾಗನೆಂದು ನಿರ್ಧರಿಸಿದ್ದಾಳೆ. ಅದರಲ್ಲಿ ಭವಿ ಬಂದು ಬೇಡಿದರೆ? ಅಕ್ಕನ ಅವಸ್ಥೆ ಏನಾಗಿರಬೇಡ? ಕರೆ ಬಂದಿರುವುದು ಅರಮನೆಯಿಂದ ನಿಜ ಆದರೇನು?

ರತ್ನದ ಸಂಕೋಲೆಯಾದರೆ ತೊಡರಲ್ಲವೇ?
ಮುತ್ತಿನ ಬಲೆ ಯಾದರೆ ಬಂಧನವಲ್ಲವೇ?
ಚಿನ್ನದ ಕತ್ತಿಯಲ್ಲಿ ತಲೆಯ ಹೊಯ್ದರೆ ಸಾಯದಿರ್ಪರೇ?
ಲೋಕದ ಭಜನೆಯ ಭಕ್ತಿಯಲ್ಲಿ ಸಿಕ್ಕಿದರೆ
ಜನನ ಮರಣ ಬಿಡುವುದೇ ಚೆನ್ನಮಲ್ಲಿಕಾರ್ಜುನ.

ಏನು ಮಾಡುವುದು ಈಗ? "ಅಲ್ಲೆಂದೊಡೆ ಉಂಟೆಂಬೂದೀ ಮಾಯೆ! ಒಲ್ಲೆನೆಂದೊಡೆ ಬಿಡದೀ ಮಾಯೆ! ಎನಗಿದು ವಿಧಿಯೇ ಎಂದು ತೊಳಲಾಡುವಳು.

ಕೊನೆಗೆ ಹೆಗ್ಗಡತಿಯರನ್ನು ಕರೆಸಿ ಕೌಶಿಕ ಮಹಾರಾಜರೇ ನನ್ನ ಬಳಿ ಬಂದು ನನ್ನ ಮನೋನೂ ರಾಗವ ಸಲ್ಲಿಸುವಂತೆ ಶಪಥ ಮಾಡಲಿ ಎಂದು ಹೇಳಿ ಕಳುಹಿಸುತ್ತಾಳೆ. ಮಹಾದೇವಿಯ ಮನೆಗೆ ಬಂದ ಕೌಶಿಕ, ತನ್ನ ಘನತೆ ಹೆಚ್ಚುವಂತೆ ನುಡಿದ; "ಲಲನೆ ಕೇಳು ನಿನ್ನ ಬಯಕೆಯ ಸಲ್ಲಿಸುವೆನು ಮೊದಲಲ್ಲಿ; ಬಳಿಕಾನೊಲಿಸಿಕೊಂಬೆನು ನಿನ್ನನ್ನು; ಅಂತಲ್ಲದೆ ದುರುಕ್ತಿಯಲ್ಲಿ ನೆಲನೊಡೆಯ ನಾನೆಂಬ ಗರ್ವದ ಬಲು ಹುಗಿಲುಹನು ಮಾಡಿದೊಡೆ ನನಗೆ ದುರ್ಗತಿ ಉಂಟಾಗಲಿ ಎಂದು ನುಡಿದ. ದೊರೆ ಕೌಶಿಕನ ಮಾತನ್ನು ನಂಬಿ ಅಂದಣವನ್ನೇರಿ ಅರಮನೆಗೆ ಹೋದಳು ಮಹಾದೇವಿ. ಕಾತುರನಾಗಿದ್ದ ಕೌಶಿಕ ಕೈಸಾರಿದ್ದ ರೂಪ ರಾಶಿ ಕೈಗೆ ನಿಲುಕದೆ ಹೋಗುತ್ತಿರುವುದನ್ನು ಕಂಡು ದುಡುಕಿದನೇನೋ... ಮಹಾದೇವಿ ಅವನ ಮೋಹದ ಮಬ್ಬು ಇಳಿವಂತೆ, ಮಾಯೆಯ ಕತ್ತಲು ಹರಿಯುವಂತೆ ಉಟ್ಟ ಸೀರೆಯ ತೊಟ್ಟ ತೊಡಿಗೆಯ ತೆಗೆದೊಗೆದು ನುಡಿದಳು."ಅಮೇಧ್ಯದ ಹಡಿಕೆ, ಮೂತ್ರದ ಕುಡಿಕೆ, ಎಲುವಿನ ತಡಿಕೆ, ಕೀವಿನ ಅಡಿಕೆ–ಸುಡಲೀ ದೇಹವ! ಒಡಲು ಹಿಡಿದು ಕೆಡದಿರು– ಚೆನ್ನಮಲ್ಲಿಕಾರ್ಜುನನರಿ ಮರುಳೆ". ಕೌಶಿಕ ಸ್ತಂಭೀತನಾದ! ಮಾನವ ಶರೀರದ ನಿಜ ಸ್ವರೂಪವನ್ನು ಕಂಡು ನಿರ್ವೇದಗೊಂಡನೋ, ದಿಗಂಬರತೆಯಲ್ಲಿ ಪೂಜ್ಯತೆಯನ್ನು ಕಂಡು ಪರಾನ್ಮುಖನಾದನೋ ತಿಳಿಯದು. ಅಂತೂ ಇಂತೂ ಕಂತುವಿನ ಸಂತೆ ಮುಗೀತು. ಆಶಾ ರಹಿತೆ ಅಕ್ಕಮಹಾದೇವಿ ಕೇಶಾಂಬರಧಾರೆಯಾಗಿ ರಾಹು ಮುಸುಕಿದ ಚಂದ್ರಕಳೆಯಂತೆ ಹೊರಟು ಹೋಗುತ್ತಿರುವುದನ್ನು ನೋಡುತ್ತಾ ನಿಂತು ಬಿಟ್ಟ–ವಿಸ್ಮಿತನಾಗಿ, ನಿಬ್ಬೆರಗಾಗಿ......



ತಂದೆ ತಾಯಿಯರಿಗೆ ಸುದ್ದಿ ತಿಳಿಯಲು ದಿಗ್ಭ್ರಾಂತ ರಾಗಿರ ಧಾವಿಸಿ ಬಂದರು. ಹೆತ್ತ ಹೊಟ್ಟೆಗೆ ಉಡಿಹೊಯ್ದು ಹೋಗದಿರು ಎಂದು ಶೋಕಿಸಿದರು. ಅಕ್ಕನ "ಉಕ್ಕಿನ" ನಿರ್ಧಾರ ಕರಗಲಿಲ್ಲ. ತಂದೆ ನಿರ್ಮಲ ಶೆಟ್ಟಿ, ನಿನಗೆ ಮನೆಯಲ್ಲಿಯೇ ಏಕಾಂತ ವಾಸದ ವ್ಯವಸ್ಥೆ ಮಾಡಿ ಕೊಡುವೆ ಇಲ್ಲಿಯೇ ಇರು ಎಂದು ಕೇಳಲು ಥಟ್ಟನೆ ಬಂದಿತು ಅಕ್ಕನ ಉತ್ತರ...

**"ಉಸುರಿನ ಪರಿಮಳವಿರಲು**
**ಕುಸುಮದ ಹಂಗೇಕಯ್ಯ?**
**ಕ್ಷಮೆ ದಯೆ ಶಾಂತಿ ಸೈರಣೆ ಇರಲು ಸಮಾಧಿಯ ಹಂಗೇಕಯ್ಯ?**
**ಲೋಕವೇ ತಾನಾದ ಬಳಿಕ**
**ಏಕಾಂತದ ಹಂಗೇಕಯ್ಯ ಚೆನ್ನಮಲ್ಲಿಕಾರ್ಜುನ."**

ಹೆತ್ತ ಕರುಳಿನ ಕರೆಗೂ ಕಿವುಡಾಗಿದ್ದಿತವಳ ಕಿವಿ. ಮಹದೋದ್ದೇಶಕ್ಕಾಗಿ ಹುಟ್ಟಿದ ಮಹಾಜೀವ ಮಹಾದೇವಿ. ಭಕ್ತಿಭರದಲ್ಲಿ ಹೊರಟಿದ್ದಾಳೆ. ಆದರೂ ಆವರಿಸಿದ್ದ ತಂದೆ ತಾಯ್ತನ ಮತ್ತೆ ನುಡಿಸಿತು. ಜೋಕೆ ಮಗಳೇ, ಜೋಕೆ ನೀನೆಷ್ಟೆಂದರೂ ಹೆಣ್ಣು ಜೀವ ಎನ್ನಲು ಅಮೃತ ಸ್ಮಿತೊಡನೆ ಅಕ್ಕ ಉತ್ತರವಿತ್ತಳು.

**ಹೆಣ್ಣು ಹೆಣ್ಣಾದೊಡೆ ಗಂಡಿನ ಸೂತಕ.**
**ಗಂಡು ಗಂಡಾದೊಡೆ ಹೆಣ್ಣಿನ ಸೂತಕ.**
**ಮನದ ಸೂತಕ ಹಿಂಗಿದಡೆ**
**ತನುವಿನ ಸೂತಕಕ್ಕೆ ತೆರೆಹುಂಟೆ ಅಯ್ಯಾ?**
**ಮೊದಲಿಲ್ಲದ ಸೂತಕಕ್ಕೆ ಮರುಳಾಯಿತ್ತು ಜಗವೆಲ್ಲ!**
**ಎನ್ನ ದೇವ ಚನ್ನಮಲ್ಲಿಕಾರ್ಜುನಯ್ಯನೆಂಬ ಗುರುವಂಗೆ ಜಗವೆಲ್ಲ ಹೆಣ್ಣು ನೋಡಾ"!.**

'ಜಿನಾ ಧರ್ಮ ವಾಸವಾಗಿ' ಮೆರೆದ ಕನ್ನಡ ನಾಡಿನಲ್ಲಿ ದಿಗಂಬರತ್ವ ಹೊಸದೇನು ಅಲ್ಲ. ಆದರೆ ಏರು ಜವ್ವನದ ಬಾಲೆಯೋರ್ವಳು ಬರಿ ಮೈಯಿಂದ ಹೊರಟಿದ್ದು ಯಾರಿಗಾದರೂ ಅಚ್ಚರಿಯನ್ನುಂಟು ಮಾಡದೆ ಇರದು.ಕಲ್ಯಾಣವನ್ನು ಕಾಣಬೇಕೆಂದು ಹೊರಟಳು. ಕಲ್ಯಾಣದಲ್ಲಿ ಕಾಲಿಡುತ್ತಲೇ ಕಿನ್ನರಯ್ಯನ ಕಠೋರ ಪರೀಕ್ಷೆಗೆ ಒಳಗಾದಳು. ಕಿನ್ನರ ರಂತಪ್ಪ ಸೋದರರೆನೆಗೆ ಎಂದು ನುಡಿದು ಬಸವಣ್ಣನವರ ದರ್ಶನಕ್ಕೆ ಧಾವಿಸಿದಳು. ಅನುಭವ ಮಂಟಪದಲ್ಲಿ ಅಕ್ಕನ ಅಗ್ನಿಪರೀಕ್ಷೆ ನಡೆಯಿತು. ಅಲ್ಲಮ ಪ್ರಭುಗಳ ಪರೀಕ್ಷೆ ಕೇಳುವುದೇನಿದೆ? ಆ ಕಠಿಣ ಕಠೋರ ಪರೀಕ್ಷೆಯಲ್ಲಿಯೂ ಪಾರಂಗತಳಾದಳು. 'ಪರಮ ಸುಖ ಪರಿಣಾಮ ಮನ ಮೀರೆದಪ್ಪಿ ನಾನು ನಿಜವನ್ನನೈದುವ ಠವು ಹೇಳಾ ಚೆನ್ನಮಲ್ಲಿಕಾರ್ಜುನಯ್ಯ?' ಎಂದು ಪ್ರಭುವಿಗೆ ಪ್ರಾರ್ಥಿಸಿ ಕೊಂಡಳು. ಅವಳ ಒಲವನ್ನರಿತ ಪ್ರಭುದೇವರು ಹೇಳಿದರು "ನಾನೀನೆಂಬುಭಯ ಸಂಗವನಳಿದು ತಾನು ತಾನಾದ ತ್ರಿಕೂಟವೆಂಬ ಮಹಾಗಿರಿಯ ತುತ್ತ ತುದಿಯ ಮೆಟ್ಟಿ ನೋಡಲು ಬಟ್ಟ ಬಯಲು ಕಾಣಬಹುದು ನೋಡ! ಆ ಬಯಲ ಬೆರೆಸುವರೆ ತ್ರಿಕೂಟ ಗಿರಿ ಒಳಗೊಂದು ಕಾಣಬಾರದ ಕದಳಿಯುಂಟು ನೋಡ! ಕದಳಿಯ ತಳದಲ್ಲಿ ಒಳಹೊಕ್ಕು ನೋಡಲು ತೊಳಗಿ ಬೆಳಗುವ ಜ್ಯೋತಿಯುಂಟು ಕೇಳ! ನಡೆಯೆಲ್ಲಿಗೆ ತಾಯೇ, ಗುಹೇಶ್ವರ ಲಿಂಗದಲ್ಲಿ ಪರಮ ಪದವಿ ನಿನಗೆ ಸ್ವಯವಹುದು ನೋಡ"

ಶ್ರೀಶೈಲ, ತ್ರಿಕೋಟ, ಕದಳಿ ಎಂಬ ಶಬ್ದಗಳು ಕಿವಿಗೆ ತಾಗುತ್ತಲೆ ರೋಮಾಂಚಿತಳಾದಳು ಅಕ್ಕಮಹಾದೇವಿ. ತಾನು ಚಿಕ್ಕಂದಿನಿಂದಲೂ ಕಾಣುತ್ತಲ್ಲಿದ್ದ ಕನಸೇ ಶ್ರೀಶೈಲ; ಅಲ್ಲಿ ತಾನು ತಾನಾದ ತ್ರಿಕೂಟಗಿರಿ; ಅದರೊಳಗೊಂದು ಕಾಣಬಾರದ ಕದಳಿ. ಆಹಾ, ಅದೆಷ್ಟು ಪಾವನ ರಮಣೀಯ ಸ್ಥಾನವಿರಬಹುದು! ಅಲ್ಲಿಗೆ ಹೋಗಲೇಬೇಕು ತಡ ಮಾಡದೆ ಕದಳಿ ಸೇರಬೇಕು ಎಂದು ನಿಶ್ಚಯಿಸಿ ಹೊರಟಳು. ದಾರಿಯ ಉದ್ದಕ್ಕೂ ಅಕ್ಕ ಅಳಿ ಸಂಕುಲವೇ, ಮಾ ಮರವೇ, ಬೆಳದಿಂಗಳ ಕೋಗಿಲೆ, ಚಿಲಿಮಿಲಿ ಎಂದೂಡುವ ಗಿಳಿಗಳಿರ ಚೆನ್ನಮಲ್ಲಿಕಾರ್ಜುನನ ನೀವು ಕಂಡಿರಾ ಎಂದು ಹಾಡುತ್ತಾ ಹಸಿವೆ ನೀ ನಿಲ್ಲೋ ನಿಲ್ಲು, ತೃಷೆ ನೀನಿಲ್ಲೋ ನಿಲ್ಲು ಎಂದು ಬೇಡುತ್ತಾ, ಹಸಿವಾದೊಡೆ ಭಿಕ್ಷಾನ್ನಗಳುಂಟು, ತೃಷೆಯಾದೊಡೆ ಕೆರೆಬಾವಿಗಳುಂಟು. ಆತ್ಮಸಂಗಾತಕ್ಕೆ ನೀ ನನಗುಂಟು ಎಂದು ಹೇಳಿ ಶ್ರೀಶೈಲವನ್ನು ಕಂಡಳು."ಲೋಕವಹಿಡಿದು ಲೋಕವ ಹಿಂಗಿದಂತಿಪ್ಪೆನು...... ಹತ್ತರೊಳಗೆ ಹನ್ನೊಂದಾಗಿ ನೀರ ತಾವರೆಯಂತಿಪ್ಪೆನು"ಎಂದು ಅಕ್ಕನು ಭಾಷೆ ಇಟ್ಟಿದ್ದಳು. ಅದರಂತೆಯೇ ಅವಳು ಬಾಳಿದಳು. ಕರುನಾಡಿನ ಕಾಸಾರದಲ್ಲಿ ತಿಳಿ ಬಾಳಿನ ತಾವರೆಯಾಗಿ, ಆಧ್ಯಾತ್ಮದ ಅರವಿಂದ ವಾಗಿ ಅರಳಿದಳಾಕೆ. ಸುತ್ತ ಸೌರಭವನ್ನು ಬೀರಿ ತಾವರೆಯಷ್ಟೇ ನಿರ್ಮಲವಾದ, ಪರಿಶುದ್ಧವಾದ ಬಾಳನ್ನು ಬಾಳಿ ಬಯಲಾದಳು. ಭಿನ್ನವಿಲ್ಲದರಿವು, ಮನ್ನಣೆಯ ಮಮಕಾರವ ಮೀರಿದ ಭಾವಗಳನ್ನು ಅಳವಡಿಸಿಕೊಂಡು "ತನ್ನಿಂದ ತಾನಾದಳು" ಅಕ್ಕಮಹಾದೇವಿ. ಅಕ್ಕನ ಪಾದಪದ್ಮಗಳಿಗೆ ಶರಣು ಗಯ್ಯುತ್ತಾ.....

**– ಕೊಟ್ಟೂರೇಶ್ವರಿ ಬಸಾಪುರ. ಶಿಕ್ಷಕಿ.ಹಗರಿಬೊಮ್ಮನಹಳ್ಳಿ.**

## ನಿತ್ಯ ಪಂಚಾಂಗ

ಮಾಸ: ಚೈತ್ರ । ಸಂವತ್ಸರ: ವಿಶ್ವಾವಸು

**15–04–2025 – ಮಂಗಳವಾರ**

| | |
|---|---|
| ತಿಥಿ | : ದ್ವಿತೀಯ |
| ಪಕ್ಷ | : ಕೃಷ್ಣ |
| ನಕ್ಷತ್ರ | : ವಿಶಾಖ |
| ಯೋಗ | : ಸಿದ್ಧಿ |
| ಕರಣ | : ಗರಜ |
| ಸೂರ್ಯೋದಯ | : 06:07:32 |
| ಸೂರ್ಯಾಸ್ತ | : 18:46:35 |
| ರಾಹು ಕಾಲ | : 15:37–17:12 |
| ಯಮಘಂಡ ಕಾಲ | : 09:17–10:52 |
| ಗುಳಿಕ ಕಾಲ | : 12:27–14:02 |



## ತುಂಗಭದ್ರಾ ನೀರಿನ ಮಟ್ಟ

ಸೋಮವಾರ : 14–04–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1584.80 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 1299 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 7.196 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1578.93 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 162 ಕ್ಯುಸೆಕ್ |
| ಸಾಮರ್ಥ್ಯ | 3.972 ಟಿಎಂಸಿ |

ಬಳ್ಳಾರಿಯಲ್ಲಿ ಸಂಭ್ರಮದ ಡಾ.ಬಿ.ಆರ್.ಅಂಬೇಡ್ಕರ್ ಅವರ 134ನೇ ಜನ್ಮದಿನೋತ್ಸವದಲ್ಲಿ ಶಾಸಕ ಬಿ.ನಾಗೇಂದ್ರ ಹೇಳಿಕೆ

# ಸಂವಿಧಾನ ಸರ್ವರಿಗೂ ಶ್ರೀರಕ್ಷೆ

■ **ಹಂಪಿ ಟೈಮ್ಸ್ ಬಳ್ಳಾರಿ**

ಭಾರತ ರತ್ನ, ಸಂವಿಧಾನ ಶಿಲ್ಪಿ ಬಾಬಾ ಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ಅವರು ರಚಿಸಿರುವ ಸಂವಿಧಾನವು ಪ್ರತಿಯೊಬ್ಬರಿಗೂ ಶ್ರೀರಕ್ಷೆಯಾಗಿದೆ ಎಂದು ಬಳ್ಳಾರಿ ಗ್ರಾಮೀಣ ಶಾಸಕ ಬಿ.ನಾಗೇಂದ್ರ ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಸಮಾಜ ಕಲ್ಯಾಣ ಇಲಾಖೆ ಮತ್ತು ಮಹಾನಗರ ಪಾಲಿಕೆ ಇವರ ಸಂಯುಕ್ತಾಶ್ರಯದಲ್ಲಿ ನಗರದ ಡಾ.ರಾಜ್ ಕುಮಾರ್ ರಸ್ತೆಯ ಮುನಿಸಿಪಲ್ ಕಾಲೇಜು ಮೈದಾನದಲ್ಲಿ ಸೋಮವಾರ ಆಯೋಜಿಸಿದ್ದ ಭಾರತ ರತ್ನ, ಸಂವಿಧಾನ ಶಿಲ್ಪಿ ಡಾ.ಬಿ.ಆರ್ ಅಂಬೇಡ್ಕರ್ ಅವರ 134 ನೇ ಜನ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು. ತುಳಿತಕ್ಕೊಳಗಾದವರನ್ನು ಮುಖ್ಯ ವಾಹಿನಿಗೆ ತರಲು ಅಂಬೇಡ್ಕರ್ ಅವರು ತಮ್ಮ ಜೀವನವನ್ನೇ ಮುಡಿಪಾಗಿಟ್ಟು, ಹಗಲು–ರಾತ್ರಿ ಎನ್ನದೇ ಶ್ರಮಿಸಿ ಅಪಾರ ಜ್ಞಾನ ಹೊಂದಿ ಸಂವಿಧಾನವನ್ನೆ ನಮಗೆ ಅರ್ಪಿಸಿದ್ದಾರೆ. ಅಂಬೇಡ್ಕರ್ ಅವರ ತತ್ವಾದರ್ಶ ಜೀವನ ಎಲ್ಲರಿಗೂ ಮಾದರಿಯಾಗಬೇಕು ಎಂದು ತಿಳಿಸಿದರು.

ಶೋಷಿತರು, ದಲಿತರು, ಹಿಂದುಳಿದ ವರ್ಗದವರು ಸೇರಿದಂತೆ ಎಲ್ಲಾ ಸಮುದಾಯಗಳಿಗೆ ಸಮಾನ ಅವಕಾಶ ದೊರಕಿಸಿಕೊಡಬೇಕೆಂಬ ಆಶಯ ಬಾಬ ಸಾಹೇಬ್ ಅಂಬೇಡ್ಕರ್ ಹೊಂದಿದ್ದರು. ಅವರ ಆಶಯಗಳನ್ನೇ ನಮ್ಮ ಸರ್ಕಾರವು ಅಳವಡಿಸಿಕೊಂಡು ಅಭಿವೃದ್ಧಿ ಕಾರ್ಯಕ್ರಮಗಳನ್ನು ಜಾರಿಗೊಳಿಸುತ್ತಿದೆ ಎಂದು ಹೇಳಿದರು.

ನಮ್ಮ ಸರ್ಕಾರದ 4 ಲಕ್ಷ ಕೋಟಿ ರೂ. ಬಜೆಟ್‌ನಲ್ಲಿ 38 ಸಾವಿರ ಕೋಟಿ ರೂ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಸಮುದಾಯದವರ ಅಭಿವೃದ್ಧಿಗಾಗಿ ಮೀಸಲಿರಿಸಲಾಗಿದೆ. ಬಾಬಾ ಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ಅವರ ಕೊಡುಗೆ, ವಿಚಾರಧಾರೆಗಳನ್ನು ಮುಂದಿನ ಪೀಳಿಗೆಗೆ ತಿಳಿಸಿಕೊಡುವ ಕೊಡುವ ಕೆಲಸವಾಗಬೇಕಿದೆ. ಬಳ್ಳಾರಿ ಜಿಲ್ಲೆಯ ಅಭಿವೃದ್ಧಿಗೆ ನಾವೆಲ್ಲರೂ ಒಗ್ಗಟ್ಟಾಗಿ ಶ್ರಮಿಸೋಣ ಎಂದು ಕರೆ ನೀಡಿದರು.

ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಅಂಬೇಡ್ಕರ್ ಅವರ ಜಯಂತಿ ಕೇವಲ ಆಚರಣೆಗೆ ಸೀಮಿತವಾಗದೇ ಅವರನ್ನು ಪ್ರತಿನಿತ್ಯವೂ ನೆನೆಯಬೇಕು. ಅವರು ಕೇವಲ ಒಂದೇ ಸಮುದಾಯಕ್ಕೆ ಸೀಮಿತವಾದವರಲ್ಲ, ಬದಲಾಗಿ ಎಲ್ಲಾ ಸಮುದಾಯದವರ ಶ್ರೇಯೋಭಿವೃದ್ಧಿಗೆ ತಮ್ಮ ಜೀವನವನ್ನೇ ಸವೆಸಿದವರು ಎಂದು ಹೇಳಿದರು.



ಹಿಂದೆಲ್ಲಾ ಶೋಷಿತ ವರ್ಗದವರನ್ನು ತುಳಿಯಲು ಸಾಕಷ್ಟು ಸಂಚು ನಡೆಯುತ್ತಿದ್ದವಾದರೂ, ಅಂಬೇಡ್ಕರ್ ಅವರು ನೀಡಿರುವ ಸಂವಿಧಾನವು ತಡೆಗೋಡೆಯಾಗಿ ನಿಂತಿದೆ. ಸಂವಿಧಾನವನ್ನು ಉಳಿಸುವ ಮತ್ತು ಬೆಳೆಸುವುದಕ್ಕಾಗಿ ನಾವೆಲ್ಲರೂ ಒಗ್ಗೂಡಬೇಕಿದೆ ಎಂದು ಕರೆ ನೀಡಿದರು.

ಡಾ.ಬಾಬು ಜಗಜೀವನ್‌ರಾಮ್ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದ ಅಧ್ಯಕ್ಷ ಮುಂಡರಗಿ ನಾಗರಾಜ ಮಾತನಾಡಿದರು. ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಡಾ.ಬಿ.ಆರ್. ಅಂಬೇಡ್ಕರ್ ಬಹುಶಿಸ್ತೀಯ ಸಂಶೋಧನಾ ಕೇಂದ್ರದ ನಿರ್ದೇಶಕರೂ ಹಾಗೂ ಪ್ರಾಧ್ಯಾಪಕರಾದ ಡಾ.ಗೌರಿ ಮಾಣಿಕ್ ಮಾನಸ್ ಅವರು ವಿಶೇಷ ಉಪನ್ಯಾಸ ನೀಡಿದರು.

ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್.ಎನ್ ಅವರು ಸಂವಿಧಾನ ಪೀಠಿಕೆ ವಾಚನ ಮಾಡಿಸಿದರು. ಗಣ್ಯರು ಡಾ.ಬಿ.ಆರ್.ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸುವ ಮೂಲಕ ಉದ್ಘಾಟಿಸಿದರು.

ಕಾರ್ಯಕ್ರಮದಲ್ಲಿ ಸಮಾಜ ಕಲ್ಯಾಣ ಇಲಾಖೆಯಡಿ ಬರುವ ವಸತಿ ನಿಲಯಗಳಲ್ಲಿ ವಿದ್ಯಾಭ್ಯಾಸ ಹೊಂದಿ ಕಳೆದ ಸಾಲಿನಲ್ಲಿ ಉತ್ತಮ ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಬಳಿಕ ಸಮಾಜ ಕಲ್ಯಾಣ ಇಲಾಖೆ ವತಿಯಿಂದ 60 ದಿನಗಳ ಹೊಲಿಗೆಯಂತ್ರ ತರಬೇತಿ ಪಡೆದ ಅಭ್ಯರ್ಥಿಗಳಿಗೆ ಹೊಲಿತೆಯಂತ್ರ ಮತ್ತು ಪ್ರಮಾಣ ಪತ್ರಗಳನ್ನು ಗಣ್ಯರು ವಿತರಣೆ ಮಾಡಿದರು.

ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆಯ ಮಹಾಪೌರರಾದ ಮುಲ್ಲಂಗಿ ನಂದೀಶ್, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಜಿಲ್ಲಾಧ್ಯಕ್ಷ ಕೆ.ಇ.ಚಿದಾನಂದಪ್ಪ, ಜಿಲ್ಲಾ ಡಾ.ಬಿ.ಆರ್.ಅಂಬೇಡ್ಕರ್ ಸಂಘದ ಅಧ್ಯಕ್ಷ ಬಿ.ಕೆ.ಅನಂತ ಕುಮಾರ್, ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಶೋಭಾರಾಣಿ.ವಿ.ಜೆ., ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಹಮ್ಮದ್ ಹ್ಯಾರೀಸ್ ಸುಮೈರ್, ಬಳ್ಳಾರಿ ಮಹಾನಗರ ಪಾಲಿಕೆ ಆಯುಕ್ತರು, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಮಲ್ಲಿಕಾರ್ಜುನ.ಬಿ ಸೇರಿದಂತೆ ಎಲ್ಲಾ ಸ್ಥಳೀಯ ಸಂಸ್ಥೆಗಳ ಜನಪ್ರತಿನಿಧಿಗಳು, ಸಂಘ–ಸಂಸ್ಥೆಗಳ ಪದಾಧಿಕಾರಿಗಳು, ಮುಖಂಡರು ಹಾಗೂ ಸಾರ್ವಜನಿಕರು, ಮತ್ತೀತರರು ಉಪಸ್ಥಿತರಿದ್ದರು.

*ಅದ್ದೂರಿ ಸ್ತಬ್ಧಚಿತ್ರ ಮೆರವಣಿಗೆ:*

ಭಾರತ ರತ್ನ, ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಜನ್ಮ ದಿನಾಚರಣೆ ಅಂಗವಾಗಿ ಏರ್ಪಡಿಸಿದ್ದ ಮೆರವಣಿಗೆಯು ವಿವಿಧ ಸಾಂಸ್ಕೃತಿಕ ಕಲಾ ತಂಡಗಳನ್ನೊಳಗೊಂಡು ನಗರದಲ್ಲಿ ಅದ್ದೂರಿಯಾಗಿ ನಡೆಯಿತು.

ಮೆರವಣಿಗೆಯಲ್ಲಿ ಸಾರಿಗೆ ಇಲಾಖೆ ವತಿಯಿಂದ ರೂಪಿಸಿದ್ದ ವಿಧಾನಸೌಧ ಸ್ತಬ್ಧಚಿತ್ರ, ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ವಿವಿಧ ಇಲಾಖೆಗಳ ವತಿಯಿಂದ ವಿವಿಧ ಸರ್ಕಾರದ ಕಾರ್ಯಕ್ರಮಗಳು ಮತ್ತು ವಿವಿಧ ಯೋಜನೆಗಳ ಮಾಹಿತಿ ಕುರಿತ ಸ್ತಬ್ಧಚಿತ್ರಗಳು ಗಮನ ಸೆಳೆದವು.

ಮೆರವಣಿಗೆಗೆ ಮುನ್ನ ನಗರದ ಮೊದಲನೇ ರೈಲ್ವೇ ಗೇಟ್ ಬಳಿಯ ಸಮಾಜ ಕಲ್ಯಾಣ ಇಲಾಖೆಯ ಅಂಬೇಡ್ಕರ್ ಭವನ ಆವರಣದ ಡಾ.ಬಿ.ಆರ್. ಅಂಬೇಡ್ಕರ್ ಅವರ ಪುತ್ಥಳಿಗೆ ಗಣ್ಯರು ಮಾಲಾರ್ಪಣೆ ಮಾಡಿದರು.

ಮೆರವಣಿಗೆಯು ನಗರದ ಡಾ.ರಾಜ್ ಕುಮಾರ್ ರಸ್ತೆಯ ಮುನ್ಸಿಪಾಲ್ ಕಾಲೇಜು ಮೈದಾನದಿಂದ ಆರಂಭವಾಗಿ ಗಡಿಗಿ ಚೆನ್ನಪ್ಪ ವೃತ್ತ, ಬೆಂಗಳೂರು ರಸ್ತೆ, ಬ್ರೂಸ್ ಪೇಟೆ ಪೊಲೀಸ್ ಠಾಣೆ, ಹೆಚ್.ಆರ್.ಗವಿಯಪ್ಪ ವೃತ್ತದ ಮೂಲಕ ರೈಲ್ವೇ ಸ್ಟೇಷನ್ ರಸ್ತೆ ಮೂಲಕ ಮರಳಿ ಮುನಿಸಿಪಲ್ ಕಾಲೇಜು ಮೈದಾನದ ವೇದಿಕೆ ಸಭಾಂಗಣಕ್ಕೆ ತಲುಪಿ ಸಂಪನ್ನಗೊಂಡಿತು.

**ಆಕರ್ಷಕ ಬೈಕ್ ರ್‍ಯಾಲಿ:** ಡಾ.ಬಿ.ಆರ್.ಅಂಬೇಡ್ಕರ್ ಅವರ ಜನ್ಮ ದಿನಾಚರಣೆ ಅಂಗವಾಗಿ ನಗರದಲ್ಲಿ ಆಕರ್ಷಕ ಬೈಕ್ ರ್‍ಯಾಲಿ ನಡೆಯಿತು. ನೀಲಿ ಬಾವುಟಗಳನ್ನಿಡಿದು ಶಾಸಕರಾದ ಬಿ.ನಾಗೇಂದ್ರ, ನಾರಾ ಭರತ್ ರೆಡ್ಡಿ ಮತ್ತು ಲಿಡ್ಕರ್ ಅಧ್ಯಕ್ಷ ಮುಂಡರಗಿ ನಾಗರಾಜ ಮೊದಲಾದವರು ಸೇರಿದಂತೆ ನಗರದ ಶಾಸಕರ ಕಚೇರಿಯಿಂದ ಡಾ.ಬಿ.ಆರ್.ಅಂಬೇಡ್ಕರ್ ಭವನದವರೆಗೆ ಬೈಕ್ ರ್‍ಯಾಲಿ ನಡೆಯಿತು.

## ಮೈಕ್ರೋ ನ್ಯೂಸ್

## ಕೊಪ್ಪಳ-ಬೆಂಗಳೂರು ನಾನ್ ಎಸಿ ಸ್ಲೀಪರ್ ಬಸ್




**ಹಂಪಿ ಟೈಮ್ಸ್ ಕೊಪ್ಪಳ**

ಕೊಪ್ಪಳ– ಬೆಂಗಳೂರು ಮತ್ತು ಕೊಪ್ಪಳ ಬೀದರ ಮಧ್ಯ ಬಸ್ ಸಂಚಾರದಿಂದ ನಮ್ಮ ಭಾಗದ ಜನರ ಬಹುದಿನಗಳ ಬೇಡಿಕೆ ಈಡೇರಿದೆ ಎಂದು ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ ಎಸ್. ತಂಗಡಗಿ ಹೇಳಿದರು.

ಸೋಮವಾರ ಕೊಪ್ಪಳ ನಗರದ ಕೇಂದ್ರ ಬಸ್ ನಿಲ್ದಾಣದಲ್ಲಿ ಕೊಪ್ಪಳ ವಿಭಾಗದ ನೂತನ ನಾಲ್ಕು ಅಮೋಘವರ್ಷ ನಾನ್ ಎಸಿ ಸ್ಲೀಪರ್ ಹೊಸ ಬಸ್ಸುಗಳಿಗೆ ಚಾಲನೆ ನೀಡಿ ಮಾತನಾಡಿದರು. ಕೊಪ್ಪಳದಿಂದ ಬೆಂಗಳೂರು ಮತ್ತು ಬೀದರ ಮಧ್ಯ ಸಂಚರಿಸಲು ಬಸ್ಸುಗಳ ಅವಶ್ಯಕತೆ ಇತ್ತು ಹಾಗಾಗಿ ಇಂದು ಈ ಬಸ್ಸುಗಳಿಗೆ ಚಾಲನೆ ನೀಡಿದ್ದೇನೆ. ಕೊಪ್ಪಳ ವಿಭಾಗಕ್ಕೆ ನಾಲ್ಕು ಅಮೋಘವರ್ಷ ನಾನ್ ಎಸಿ ಸ್ಲೀಪರ್ ಬಸ್ಸುಗಳನ್ನು ನೀಡಿದ್ದು ಅವುಗಳಲ್ಲಿ ಎರಡು ಕೊಪ್ಪಳ–ಬೆಂಗಳೂರು ಮಾರ್ಗದಲ್ಲಿ ಕಾರ್ಯಾಚರಣೆ ಮಾಡಲಿವೆ ಈ ಬಸ್ಸು ರಾತ್ರಿ. 10 ಗಂಟೆಗೆ ಕೊಪ್ಪಳ ಕೇಂದ್ರ ಬಸ್ ನಿಲ್ದಾಣದಿಂದ ಹೊರಡಲಿದೆ. ಕೊಪ್ಪಳ– ಬೀದರ ಮಧ್ಯ 2 ಬಸ್ಸುಗಳು ಸಂಚರಿಸಲಿದ್ದು. ಕೊಪ್ಪಳದಿಂದ ರಾತ್ರಿ 8:25 ಬಸ್ಸು ಬಿಡಲಿದೆ. ಇವುಗಳು ವಾರದ ಎಲ್ಲಾ ದಿನಗಳಲ್ಲಿ ಸಂಚರಿಸಲಿದ್ದು ಸಾರ್ವಜನಿಕರು ಇವುಗಳ ಸದುಪಯೋಗ ಪಡೆದುಕೊಳ್ಳಬೇಕು ಎಂದು ಹೇಳಿದರು

**ಉದ್ಯೋಗ ಮೇಳಕ್ಕೆ ಹೆಚ್ಚುವರಿ ಬಸ್‌ಗಳ:**

**ಏ.16 ರಂದು ಕಲಬುರಗಿಯಲ್ಲಿ ನಡೆಯಲಿರುವ 'ಉದ್ಯೋಗ ಮೇಳ" ಸಮೃದ್ಧಿ ಸಮ್ಮೇಳನಕ್ಕೆ ಕಲ್ಯಾಣ ಕರ್ನಾಟಕದ ಕೊಪ್ಪಳ ಜಿಲ್ಲೆಯ ಉದ್ಯೋಗಾಕಾಂಕ್ಷಿಗಳು ಭಾಗವಹಿಸಲು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ ಕೊಪ್ಪಳ ವಿಭಾಗದ ಕುಷ್ಟಗಿ, ಗಂಗಾವತಿ, ಕುಕನೂರು, ಯಲಬುರ್ಗಾ ಮತ್ತು ಕೊಪ್ಪಳ ಭಾಗದಿಂದ ಹೆಚ್ಚುವರಿ ಬಸ್ಸುಗಳ ಸೌಕರ್ಯಗಳನ್ನು ಎಪ್ರಿಲ್ 15 ರಿಂದ 16 ರ ವರೆಗೆ ಕಲ್ಪಿಸಲಾಗಿದೆ ಎಂದು ಕೊಪ್ಪಳ ವಿಭಾಗದ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಹಿರಿಯ ನಿಯಂತ್ರಣಾಧಿಕಾರಿ ಮಹಾದೇವ ಮುಂಜಿ ತಿಳಿಸಿದ್ದಾರೆ.**

ಈ ಸಂದರ್ಭದಲ್ಲಿ ಕೊಪ್ಪಳ ವಿಧಾನಸಭಾ ಕ್ಷೇತ್ರದ ಶಾಸಕರಾದ ಕೆ. ರಾಘವೇಂದ್ರ ಹಿಟ್ನಾಳ. ಕೊಪ್ಪಳ ಸಂಸದರಾದ ಕೆ. ರಾಜಶೇಖರ ಬಸವರಾಜ ಹಿಟ್ನಾಳ, ನಗರಸಭೆ ಅಧ್ಯಕ್ಷರಾದ ಅಮ್ಜದ್ ಪಟೇಲ್, ಜಿಲ್ಲಾಧಿಕಾರಿ ನಲಿನ್ ಅತುಲ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ರಾಮ್. ಎಲ್ ಅರಸಿದ್ದಿ, ಅಪರ ಜಿಲ್ಲಾಧಿಕಾರಿ ಸಿದ್ರಾಮೇಶ್ವರ, ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಕೊಪ್ಪಳ ವಿಭಾಗದ ಹಿರಿಯ ನಿಯಂತ್ರಣಾಧಿಕಾರಿ ಮಹಾದೇವ ಮುಂಜಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

ನಾಡೋಜ ಕುಂಬಾರ ವೀರಭದ್ರಪ್ಪ ಅಭಿಮತ | ಸಾಮಾಜಿಕ ನ್ಯಾಯ ಬರಿ ಮಾತಾಗಬಾರದು

# ಭಾರತದಲ್ಲಿರುವ ಜಾತಿ ವ್ಯವಸ್ಥೆ ವಿಶ್ವದಲ್ಲೆಲ್ಲೂ ಇಲ್ಲ

**ಅಂಬೇಡ್ಕರ್ ಸಚಿವರಾಗಿದ್ದರೂ ಹಣ ಮಾಡಲಿಲ್ಲ | ಈಗಿನವರು ಏಳೆಂಟು ತಲೆಮಾರಿಗೆ ಹಣ ಇಡ್ತಾರೆ**



■ **ಹಂಪಿ ಟೈಮ್ಸ್ ಕೊಟ್ಟೂರು**

ಭಾರತ ದೇಶದಲ್ಲಿರುವ ಜಾತಿ ವ್ಯವಸ್ಥೆ, ಪ್ರಪಂಚದ ಯಾವ ದೇಶದಲ್ಲೂ ಇಲ್ಲ, ಈ ಜಾತಿ ವ್ಯವಸ್ಥೆ ಹೊಗಲಾಡಿಸಿ ಎಲ್ಲಾರಿಗೂ ಸಾಮಾಜಿಕ ನ್ಯಾಯ ಕೊಡಿಸುವ ಕೆಲಸ ಮಾಡಬೇಕಾಗಿದೆ ಎಂದು ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತರು ಸಾಹಿತಿ, ನಾಡೋಜ ಕುಂಬಾರ ವೀರಭದ್ರಪ್ಪ ತಿಳಿಸಿದರು.

ಪಟ್ಟಣದ ಎಪಿಎಂಸಿ ಆವರಣದಲ್ಲಿ ತಾಲೂಕು ಆಡಳಿತ, ತಾಲ್ಲೂಕು ಪಂಚಾಯಿತಿ ಹಾಗೂ ಸಮಾಜ ಕಲ್ಯಾಣ ಇಲಾಖೆ ಕೂಡ್ಲಿಗಿ ಇವರ ಸಂಯುಕ್ತ ಆಶ್ರಯದಲ್ಲಿ ತಾಲೂಕಿನ ಎಲ್ಲಾ ದಲಿತ ಮತ್ತು ಕನ್ನಡ ಪರ ಹಾಗೂ ಇತರೆ ಜನಪರ ಸಂಘಟನೆಗಳ ಸಹಕಾರ ದೊಂದಿಗೆ ಹಮ್ಮಿಕೊಂಡಿದ್ದ ಬಿ. ಆರ್. ಅಂಬೇಡ್ಕರ್ ರವರ 134 ನೇ ಜಯಂತ್ಯೋತ್ಸವ ಹಾಗೂ ಬಾಬು ಜಗಜೀವನ ರಾಮ್ ರವರ 118 ನೇ ಜಯಂತ್ಯೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಕರ್ನಾಟಕದಲ್ಲಿ ಜಯಂತಿಗಳನ್ನು ಆಚರಿಸಿದಷ್ಟು ಎಲ್ಲಿಯೂ ಇಲ್ಲಾ... ಈ ಜಯಂತಿಗಳು ಜಾತಿಗೆ ಸೀಮಿತ ಗೊಳಿಸದೇ ಎಲ್ಲಾರೂ ಒಗ್ಗೂಡಿ ಆಚರಣೆ ಮಾಡಬೇಕು ಆಗ ಜಯಂತಿಗಳುಅರ್ಥಪೂರ್ಣವೆನಿಸಲಿವೆ ಎಂದರು.

ಇತ್ತಿಚಿನ ದಿನಗಳಲ್ಲಿ ರಾಜಕಾರಣಿಗಳು ಎಳೇಂಟು ತಲೆಮಾರು ವರೆಗೆ ಹಣ ಸಂಗ್ರಹಿಸಿಡುತ್ತಾರೆ ಆದರೆ ಅಂದು ಡಾ. ಬಿ.ಆರ್ ಅಂಬೇಡ್ಕರ್ ಕೇಂದ್ರ ಸಚಿವರಾಗಿದ್ದರೂ ಅವರಲ್ಲಿ 2000 ರೂ ಗಳು ಸಹ ಇರಲಿಲ್ಲ.

ಅಮೇರಿಕಾದ ಕೋಲಂಬಿಯಾದ ಗ್ರಂಥಾಲಯದಲ್ಲಿ 55 ಲಕ್ಷ ಪುಸ್ತಕಗಳನ್ನು ಓದಿದ ಏಕೈಕ ವ್ಯಕ್ತಿಗಳಾದ ಮಹಾನ್ ನಾಯಕರ ಕಾರ್ಲ್ ಮಾರ್ಕ್ಸ್ ಮತ್ತು ಡಾ. ಬಿ.ಆರ್. ಅಂಬೇಡ್ಕರ್ ರವರ ವಿಗ್ರಹವನ್ನು ಅಳವಡಿಸಿರುವುದು ಹೆಮ್ಮೆಯ ವಿಷಯ ಎಂದರು.

ಈ ಸಂದರ್ಭದಲ್ಲಿ ಪ.ಪಂ. ಅಧ್ಯಕ್ಷೆ ಬದ್ದಿ ರೇಖಾ, ಉಪಾಧ್ಯಕ್ಷ ಸಿದ್ದಯ್ಯ, ತಹಶೀಲ್ದಾರ್ ಅಮರೇಶ್ ಜಿ.ಕೆ, ಮುಖ್ಯಾಧಿಕಾರಿ ನಸರುಲ್ಲಾ, ಸಿಪಿಐ ವೆಂಕಟಸ್ವಾಮಿ, ಇಒ ಆನಂದ ಕುಮಾರ, ಪಿಎಸ್‌ಐ ಗೀತಾಂಜಲಿ ಸಿಂಧೇ, ಯೋಗಿಶ್ವರ ದಿನ್ನೆ , ಎನ್ ಭರ್ಮಣ್ಣ, ಮುಖಂಡರಾದ ಮಂಜುನಾಥ, ಜಯ ಪ್ರಕಾಶ್, ಬದ್ದಿ ಮರಿಸ್ವಾಮಿ, ಹನುಮಂತಪ್ಪ, ಕೊಟ್ರೇಶ್, ಪ. ಪಂ ಸದಸ್ಯರು ಸೇರಿದಂತೆ ಅನೇಕರು ಉಪಸ್ಥಿತರಿದ್ದರು.




**ಹೊಸಪೇಟೆ ತಾಲೂಕಿನ ನಾಗೇನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸೋಮವಾರ ಡಾ.ಬಿ.ಆರ್.ಅಂಬೇಡ್ಕರ್ ಅವರ 134ನೇ ಜಯಂತಿಯನ್ನು ಆಚರಿಸಲಾಯಿತು. ನಾಗೇನಹಳ್ಳಿ ಗ್ರಾಪಂ ಅಧ್ಯಕ್ಷ ಎಂ.ದುರುಗಪ್ಪ, ಗ್ರಾಪಂ ಸದಸ್ಯರು, ಶಾಲಾ ಎಸ್ಡಿಎಂಸಿ ಅಧ್ಯಕ್ಷ ರವಿಶಂಕರ ಹಾಗೂ ಎಸ್ಡಿಎಂಸಿ ಸದಸ್ಯರು, ಶಿಕ್ಷಕರು, ವಿದ್ಯಾರ್ಥಿಗಳು ಇದ್ದರು.**

ಕ್ರೀಡಾ ವಸತಿ ಶಾಲೆ–ನಿಲಯಗಳ ಪ್ರವೇಶಕ್ಕೆ

# ವಿಶೇಷ ಆಯ್ಕೆ ಶಿಬಿರಗಳು

■ **ಹಂಪಿ ಟೈಮ್ಸ್ ಬಳ್ಳಾರಿ**

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯು ರಾಜ್ಯಾದ್ಯಂತ ಒಟ್ಟು 02 ಕ್ರೀಡಾ ವಸತಿ ಶಾಲೆ ಹಾಗೂ 32 ಕ್ರೀಡಾ ವಸತಿ ನಿಲಯಗಳನ್ನು ಹೊಂದಿದೆ. ಈ ಕ್ರೀಡಾ ವಸತಿ ಶಾಲೆ/ನಿಲಯಗಳಿಗೆ 5ನೇತರಗತಿ, 8ನೇ ತರಗತಿ ಮತ್ತು ಪ್ರಥಮ ಪಿ.ಯು.ಸಿ. ಹಂತದ ಕ್ರೀಡಾಪಟುಗಳಿಗೆ ಪ್ರವೇಶಾವಕಾಶ ನೀಡಲಾಗುತ್ತಿದ್ದು ಕ್ರೀಡಾ ಪಟುಗಳಿಗೆ ಉಚಿತ ಊಟೋಪಹಾರ, ವಸತಿ, ವೈಜ್ಞಾನಿಕ ಕ್ರೀಡಾ ತರಬೇತಿ,ಕ್ರೀಡಾ ಸಲಕರಣೆಗಳು, ಕ್ರೀಡಾ ಸಮವಸ್ತ್ರ ಕ್ರೀಡಾಕೂಟಗಳಲ್ಲಿ ಭಾಗವಹಿಸಲು ದಿನಭತ್ಯೆ/ಪ್ರಯಾಣ ಭತ್ಯೆ ಇತ್ಯಾದಿಗಳನ್ನು ಒದಗಿಸಲಾಗುತ್ತಿದೆ.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಕ್ರೀಡಾ ವಸತಿ ಶಾಲೆ/ನಿಲಯಗಳಲ್ಲಿ ತರಬೇತಿ ಪಡೆದ ಅನೇಕ ಕ್ರೀಡಾಪಟುಗಳು ರಾಷ್ಟ್ರೀಯ ಮತ್ತು ಅಂತರ–ರಾಷ್ಟ್ರೀಯ ಮಟ್ಟದಲ್ಲಿ ಉತ್ತಮ ಸಾಧನೆ ದಾಖಲಿಸಿರುತ್ತಾರೆ.

ಪ್ರಖ್ಯಾತ ಕ್ರೀಡಾಪಟುಗಳಾದ ಪ್ರಮೀಳಾ ಅಯ್ಯಪ್ಪ, ಜಿ.ಜಿ. ಶೋಭಾ, ಹೆಚ್.ಎಂ.ಜ್ಯೋತಿ, ಎಸ್.ಡಿ. ಈಶನ್, ಬಾಂಧವ್ಯ ಶಶಿಕಾಂತ್, ಮಲಪ್ರಭಾ ಜಾಧವ್, ಮೋಹಿತ್ ಹೆಚ್.ಎಸ್. ಪ್ರಿಯಾಂಕ ಪಿ. ಹಲವಾರು ನೂರಾರು ಕ್ರೀಡಾಪಟುಗಳು ಕ್ರೀಡಾ ವಸತಿ ಶಾಲೆ/ನಿಲಯದಿಂದ ಹೊರಹೊಮ್ಮಿದ ಕ್ರೀಡಾಪಟುಗಳಾಗಿರುತ್ತಾರೆ.

ಅಲ್ಲದೇ, ಈ ವಸತಿ ಶಾಲೆ/ನಿಲಯಗಳಲ್ಲಿ ತರಬೇತಿ ಪಡೆದ ನೂರಾರು ಕ್ರೀಡಾಪಟುಗಳು ತಮ್ಮ ಕ್ರೀಡಾ ಸಾಧನೆಯ ಹಿನ್ನೆಲೆಯಲ್ಲಿ ಪೊಲೀಸ್, ರೈಲ್ವೆ ಅರಣ್ಯ, ಆದಾಯ ತೆರಿಗೆ ಇಲಾಖೆ, ಮಹಾಲೇಖಪಾಲರ ಕಛೇರಿ, ಬ್ಯಾಂಕ್‌ಗಳು ಹಾಗೂ ಇನ್ನಿತರೆ ಸರ್ಕಾರಿ ಇಲಾಖೆಗಳಲ್ಲಿ ಉದ್ಯೋಗವನ್ನು ಪಡೆದು, ಜೀವನವನ್ನು ಉತ್ತಮ ರೀತಿಯಲ್ಲಿ ರೂಪಿಸಿಕೊಳ್ಳುವಲ್ಲಿ ಯಶಸ್ವಿಯಾಗಿರುತ್ತಾರೆ. ಗ್ರಾಮೀಣ ಭಾಗದ ಬಾಲಕ ಮತ್ತು ಬಾಲಕಿಯರಿಗೆ ಮತ್ತೊಂದು ವಿಶೇಷ ಅವಕಾಶವನ್ನು ನೀಡುವ ದೃಷ್ಟಿಯಿಂದ 2025–26 ನೇ ಸಾಲಿನಲ್ಲಿ ವಿಶೇಷ ಆಯ್ಕೆ ಶಿಬಿರವನ್ನು ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಆಯೋಜಿಸಲು ಉದ್ದೇಶಿಸಲಾಗಿದೆ.

ಏಪ್ರಿಲ್ 15 ರಂದು ಬೆಂಗಳೂರಿನ ಶ್ರೀ ಕಂಠೀರವ ಕ್ರೀಡಾಂಗಣದಲ್ಲಿ ಅಥ್ಲೆಟಿಕ್ಸ್, ಬಾಸ್ಕೆಟ್‌ಬಾಲ್, ವಾಲಿಬಾಲ್, ಫೆನ್ಸಿಂಗ್, ಆರ್ಚರಿ ಹಾಗೂ ಧಾರವಾಡದ ಜಿಲ್ಲಾ ಕ್ರೀಡಾಂಗಣದಲ್ಲಿ ಅಥ್ಲೆಟಿಕ್ಸ್, ಬಾಸ್ಕೆಟ್‌ಬಾಲ್ ವಾಲಿಬಾಲ್, ಸ್ಕೈಕ್ಲಿಂಗ್, ದಾವಣಗೆರೆ ಜಿಲ್ಲಾ ಕ್ರೀಡಾಂಗಣದಲ್ಲಿ ಕುಸ್ತಿ ಮತ್ತು ಕಬ್ಬಡಿ, ಹಾಸನ ಜಿಲ್ಲಾ ಕ್ರೀಡಾಂಗಣದಲ್ಲಿ ಪುಟ್ಬಾಲ್, ಮೈಸೂರಿನ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ, ಹಾಕಿ, ತುಮಕೂರಿನ ಜಿಲ್ಲಾ ಕ್ರೀಡಾಂಗಣದಲ್ಲಿ ಜಿಮ್ನಾಸ್ಟಿಕ್ಸ್,ಬೆಳಗಾವಿಯ ಜಿಲ್ಲಾ ಕ್ರೀಡಾಂಗಣದಲ್ಲಿ ಜೂಡೋ ಆಯ್ಕೆ ಶಿಬಿರಗಳನ್ನು ಹಮ್ಮಿಕೊಳ್ಳಲಾಗಿದೆ.

ಅದೇ ರೀತಿ ಏಪ್ರಿಲ್ 17 ರಂದು ಕಲಬುರಗಿ ಜಿಲ್ಲಾ ಕ್ರೀಡಾಂಗಣದಲ್ಲಿ ಅಥ್ಲೆಟಿಕ್ಸ್, ವಾಲಿಬಾಲ್, ಉಡುಪಿಯ ಜಿಲ್ಲಾ ಕ್ರೀಡಾಂಗಣದಲ್ಲಿ ಅಥ್ಲೆಟಿಕ್ಸ್, ಬಾಸ್ಕೆಟ್‌ಬಾಲ್, ವಾಲಿಬಾಲ್, ಕಬಡ್ಡಿ, ಬೀದರ್‌ನ ಜಿಲ್ಲಾ ಕ್ರೀಡಾಂಗಣದಲ್ಲಿ ಸೈಕ್ಲಿಂಗ್, ಬಳ್ಳಾರಿಯ ಪುಟ್ಬಾಲ್ ಕ್ರೀಡಾಂಗಣದಲ್ಲಿ ಪುಟ್ಬಾಲ್, ಗದಗ ಜಿಲ್ಲಾ ಕ್ರೀಡಾಂಗಣದಲ್ಲಿ ಹಾಕಿ, ಚಿಕ್ಕಮಗಳೂರಿನ ಜಿಲ್ಲಾ ಕ್ರೀಡಾಂಗಣದಲ್ಲಿ ಜುಡೋ ತರಬೇತಿ ಆಯ್ಕೆ ಶಿಬಿರಗಳನ್ನು ಹಮ್ಮಿಕೊಳ್ಳಲಾಗಿದೆ.

**ಆಯ್ಕೆ ನಿಯಮಗಳು:**

ರಾಜ್ಯದ ಯಾವುದೇ ಭಾಗದ ಕ್ರೀಡಾಪಟುಗಳು ಯಾವುದೇ ಸ್ಥಳದ ಆಯ್ಕೆ ಶಿಬಿರದಲ್ಲಿ ಭಾಗವಹಿಸಲು ಮುಕ್ತ ಅವಕಾಶವಿದೆ. 2025–26 ನೇ ಸಾಲಿನ ಪ್ರವೇಶಕ್ಕೆ ಈಗಾಗಲೇ ಆಯೋಜಿಸಲಾದ ಆಯ್ಕೆ ಶಿಬಿರಗಳಲ್ಲಿ ಭಾಗವಹಿಸದ ಅಭ್ಯರ್ಥಿಗಳು ಈ ವಿಶೇಷ ಆಯ್ಕೆ ಶಿಬಿರಗಳಲ್ಲಿ ಭಾಗವಹಿಸಬಹುದು.

ಈಗಾಗಲೇ ಆಯ್ಕೆ ಶಿಬಿರಗಳಲ್ಲಿ ಭಾಗಿಯಾಗಿರುವ ಆದರೆ, ರಾಜ್ಯ ಮಟ್ಟದ ಆಯ್ಕೆ ಶಿಬಿರಕ್ಕೆ ಆಯ್ಕೆಯಾಗದ ಅಭ್ಯರ್ಥಿಗಳು ತಮ್ಮ ಪ್ರದರ್ಶನವನ್ನು ಉತ್ತಮಪಡಿಸಿಕೊಳ್ಳಲು ಉದ್ದೇಶಿಸಿದಲ್ಲಿ ಈ ಬಗ್ಗೆ ಅರ್ಜಿ ನಮೂನೆಯಲ್ಲಿ ಕಡ್ಡಾಯವಾಗಿ ದಾಖಲಿಸಿ, ವಿಶೇಷ ಆಯ್ಕೆ ಶಿಬಿರದಲ್ಲಿ ಭಾಗವಹಿಸಬಹುದು.

ರಾಜ್ಯ ಮಟ್ಟದ ಆಯ್ಕೆ ಶಿಬಿರಕ್ಕೆ ಈಗಾಗಲೇ ಆಯ್ಕೆಯಾಗಿರುವವರು ಈ ವಿಶೇಷ ಆಯ್ಕೆ ಶಿಬಿರಗಳಲ್ಲಿ ಭಾಗವಹಿಸುವ ಅವಶ್ಯಕತೆ ಇಲ್ಲ.

8 ನೇ ತರಗತಿಗೆ ಪ್ರವೇಶ ಬಯಸುವ ಅಭ್ಯರ್ಥಿಗಳು ಪ್ರಸ್ತುತ 7ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದು, 8ನೇ ತರಗತಿ ಪ್ರವೇಶಕ್ಕೆ ಜೂನ್–2025 ಕ್ಕೆ ಅನ್ವಯವಾಗುವಂತೆ 14 ವರ್ಷ ವಯಸ್ಸಿನ ಒಳಗೆ ಇರಬೇಕು. ಪ್ರಥಮ ಪಿ.ಯು.ಸಿ. ಪ್ರವೇಶ ಬಯಸುವ ಅಭ್ಯರ್ಥಿಗಳ ವಯಸ್ಸು ಜೂನ್–2025 ಕ್ಕೆ ಅನ್ವಯವಾಗುವಂತೆ 18 ವರ್ಷ ವಯಸ್ಸಿನ ಒಳಗೆ ಇರಬೇಕು.

ಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಹಿಸುವವರು ಆಯಾ ಸ್ಥಳಗಳಲ್ಲಿ ಬೆಳಿಗ್ಗೆ 9 ಗಂಟೆಗೆ ವರದಿ ಮಾಡಿಕೊಳ್ಳತಕ್ಕದ್ದು. ಈ ಶಿಬಿರಗಳಲ್ಲಿ ಭಾಗವಹಿಸಿ ಆಯ್ಕೆಯಾದ ಕ್ರೀಡಾಪಟುಗಳು ರಾಜ್ಯ ಮಟ್ಟದ ಆಯ್ಕೆ ತರಬೇತಿ ಶಿಬಿರಗಳಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಿ, ಅರ್ಹರಾದಲ್ಲಿ ಕ್ರೀಡಾ ವಸತಿ ಶಾಲೆ/ನಿಲಯಗಳಿಗೆ ಪ್ರವೇಶ ನೀಡಲಾಗುವುದು.

ಹೆಚ್ಚಿನ ಮಾಹಿತಿಗಾಗಿ ಯುವ ಸಹಾಯವಾಣಿ ಸಂಖ್ಯೆ: 155265 ಅಥವಾ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿಗೆ ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ